# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/161/ಸಾ.ಸ/2021-22

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 07.12.2021

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 09.11.2021 ಮತ್ತು 17.11.2021 ರಂದು ಜರುಗಿದ ಮುಂದೂಡಲ್ಪಟ್ಟ 161ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 07.12.2021

******

ದಿನಾಂಕ 09.11.2021 ಮತ್ತು 17.11.2021 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಮುಂದೂಡಲ್ಪಟ್ಟ 161ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

(signature) 7/12/21
ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/161/ಸಾ.ಸ/2021-22

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 07-12-2021

**ದಿನಾಂಕ 09-11-2021 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 161ನೇ ಸಿಂಡಿಕೇಟ್ ಸಭೆಯ ಹಾಗೂ ದಿನಾಂಕ 17-11-2021 ರಂದು ಬೆಳಗ್ಗೆ 11.00 ಗಂಟೆಗೆ ಬೋರ್ಡ್ ರೂಮ್, ಜ್ಞಾನಭಾರತಿ ಆವರಣ, ಬೆಂಗಳೂರು-560 056, ಇಲ್ಲಿ ಜರುಗಿದ ಮುಂದೂಡಲ್ಪಟ್ಟ 161ನೇ ಸಿಂಡಿಕೇಟ್ ಸಭೆಯ ನಡಾವಳಿಗಳು.**

<u>ಹಾಜರಾದ ಸದಸ್ಯರು:</u>

1. ಪ್ರೊ. ವೇಣುಗೋಪಾಲ್ ಕೆ.ಆರ್.
   ಕುಲಪತಿಗಳು – ಸಭಾಧ್ಯಕ್ಷರು
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ- ಇವರ ಪರವಾಗಿ- ಸದಸ್ಯರು
   ಡಾ. ಹೆಚ್. ಗೌರಿ ನಾಯ್ಡು, ವಿಶೇಷಾಧಿಕಾರಿ (ದಿ:9-11-21 ರಂದು ಮಾತ್ರ)
   ಶ್ರೀ ಆರ್. ಮಂಜುನಾಥ, ನಿರ್ದೇಶಕರು (ದಿ:17-11-21 ರಂದು ಮಾತ್ರ)
3. ಡಾ. ದೀಪಾ ಶೆಣ್ಯೈ ಪಿ, – ಸದಸ್ಯರು
4. ಡಾ. ಸುಧಾಕರ ಹೆಚ್ – ಸದಸ್ಯರು
5. ಶ್ರೀ ಎಂ. ಉದಯ ಕುಮಾರ್ – ಸದಸ್ಯರು
6. ಶ್ರೀ ಕುಮಾರ ಟಿ, – ಸದಸ್ಯರು
7. ಡಾ. ಧನಂಜಯ ಬಿ.ಆರ್ – ಸದಸ್ಯರು
8. ಡಾ. ಶೈಲಜ ಎಂ – ಸದಸ್ಯರು
9. ಡಾ. ಕೆ.ಎಲ್. ಸುಧೀರ್ ಪೈ – ಸದಸ್ಯರು
10. ಡಾ. ಗೋವಿಂದರಾಜು – ಸದಸ್ಯರು
11. ಶ್ರೀ ಗೋಪಿನಾಥ್ – ಸದಸ್ಯರು
12. ಡಾ. ಎಂ.ವಿ. ಆಶಾ – ಸದಸ್ಯರು
13. ಶ್ರೀ ಪ್ರೇಮ್ ಸೋಹನ್ ಲಾಲ್ – ಸದಸ್ಯರು
14. ಪ್ರೊ. ಟಿ.ವಿ. ರಾಜು – ಸದಸ್ಯರು
15. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ – ಸದಸ್ಯರು
16. ಪ್ರೊ. ಜಯಕುಮಾರ್ ಜಿ. ರೆಡ್ಡಿ – ಸದಸ್ಯರು
17. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಪರವಾಗಿ – ಸದಸ್ಯರು
    ಶ್ರೀಮತಿ ವಿ ಸುಮಂಗಲ, ನಿರ್ದೇಶಕರು, ಕೆ.ಎಸ್.ಇ.ಇ.ಬಿ, (ದಿ:9-11-21 ರಂದು ಮಾತ್ರ)
    ಶ್ರೀಮತಿ. ಗೀತಾ, ನಿರ್ದೇಶಕರು (ದಿ:17-11-21 ರಂದು ಮಾತ್ರ)
18. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಇವರ ಪರವಾಗಿ – ಸದಸ್ಯರು
    ಶ್ರೀ ಮೊಹಮ್ಮದ್ ಜಿಯಾ ಉಲ್ಲಾಖಾನ್ ಸಹಾಯಕ ನಿರ್ದೇಶಕರು (ದಿ:17-11-21ರಂದು ಮಾತ್ರ)

19. ಪ್ರೊ. ಜೆ.ಟಿ. ದೇವರಾಜು,
ಕುಲಸಚಿವರು (ಮೌಲ್ಯಮಾಪನ) – ಸದಸ್ಯರು

20. ಶ್ರೀಮತಿ ಕೆ. ಜ್ಯೋತಿ, ಭಾ.ಆ.ಸೇ
ಕುಲಸಚಿವರು – ಸದಸ್ಯ ಕಾರ್ಯದರ್ಶಿ

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಇತ್ತೀಚೆಗೆ ನಿಧನರಾದ ಶ್ರೀ ಪುನೀತ್ ರಾಜ್‌ಕುಮಾರ್ ಹಾಗೂ ಇನ್ನಿತರ ಗಣ್ಯರ ನಿಧನಕ್ಕೆ ಮೌನವನ್ನಾಚರಿಸಿ ಸಿಂಡಿಕೇಟ್ ಸಂತಾಪ ಸೂಚಿಸಿತು.



**ವಿಷಯ ಸಂಖ್ಯೆ 1:** ದಿನಾಂಕ 14.09.2021 ರಂದು ಜರುಗಿದ 160ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕೆಳಕಂಡ ಮಾರ್ಪಾಟುಗಳೊಂದಿಗೆ ದಿನಾಂಕ 14.09.2021 ರಂದು ಜರುಗಿದ 160ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸ್ಥಿರೀಕರಿಸಿತು.

| | |
|---|---|
| ಚರ್ಚೆಯ ನಂತರ, ಸದರಿ ವಿಷಯದ ಬಗ್ಗೆ ಈಗಾಗಲೇ ರಚಿಸಿರುವ ಸಮಿತಿಯ ಅಧಿಸೂಚನೆಯನ್ನು ಕೂಡಲೇ ಹೊರಡಿಸಬೇಕು ಹಾಗೂ ಸದರಿ ಸಮಿತಿಯು ಅನಧಿಕೃತವಾಗಿ ಹೆಸರಿಟ್ಟಿರುವ ಬಗ್ಗೆ ವರದಿಯನ್ನು ನೀಡಬೇಕು ಮತ್ತು ಗ್ರಂಥಾಲಯ ಕಟ್ಟಡಕ್ಕೆ ಹೆಸರಿಡುವ ಬಗ್ಗೆ ಸಮಾರಂಭವನ್ನು ಏರ್ಪಡಿಸಲು ರೂಪುರೇಷೆಗಳನ್ನು ಸಿದ್ಧಪಡಿಸಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು. | ಚರ್ಚೆಯ ನಂತರ, ಸದರಿ ವಿಷಯದ ಬಗ್ಗೆ ಈಗಾಗಲೇ ರಚಿಸಿರುವ ಸಮಿತಿಯ ಅಧಿಸೂಚನೆಯನ್ನು ಕೂಡಲೇ ಹೊರಡಿಸಬೇಕು ಹಾಗೂ ಸದರಿ ಸಮಿತಿಯು ಇತರ ವಿಭಾಗಗಳಿಗೆ ಹೆಸರಿಡುವ ಕುರಿತು ವರದಿಯನ್ನು ನೀಡಬೇಕು ಮತ್ತು ಗ್ರಂಥಾಲಯ ಕಟ್ಟಡಕ್ಕೆ ಹೆಸರಿಡುವ ಬಗ್ಗೆ ಸಮಾರಂಭವನ್ನು ಏರ್ಪಡಿಸಲು ರೂಪುರೇಷೆಗಳನ್ನು ಸಿದ್ಧಪಡಿಸಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು. |



**ವಿಷಯ ಸಂಖ್ಯೆ 2** ದಿನಾಂಕ 14.09.2021 ರಂದು ಜರುಗಿದ 160ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

***ನಿರ್ಣಯ:***

ಚರ್ಚೆಯ ನಂತರ, ದಿನಾಂಕ 14.09.2021 ರಂದು ಜರುಗಿದ 160ನೇ ಸಿಂಡಿಕೇಟ್ ಸಭೆಯ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿ (ATR) ಗಳನ್ನು ಕೆಳಕಂಡ ಚರ್ಚೆ ಹಾಗೂ ನಿರ್ಣಯಗಳೊಂದಿಗೆ ಸಿಂಡಿಕೇಟ್ ಅನುಮೋದಿಸಿತು.

1. ಶ್ರೀ ಗೋಪಿನಾಥ್, ಡಾ. ಹೆಚ್. ಸುಧಾಕರ್, ಶ್ರೀ ಪ್ರೇಮ್ ಸೋಹನ್‌ಲಾಲ್, ಶ್ರೀ ಉದಯ ಕುಮಾರ್ ಎಂ ಮತ್ತು ಡಾ. ಗೋವಿಂದರಾಜು ಅವರು ಮಾತನಾಡಿ, 150ರಿಂದ 159ನೇ ಸಿಂಡಿಕೇಟ್ ಸಭೆಗಳ ನಿರ್ಣಯಗಳ ಮೇಲೆ ಇನ್ನೂ ಕ್ರಮ ತೆಗೆದುಕೊಳ್ಳದೇ ಬಾಕಿ ಇರುವ ಅನುಸರಣಾ ವರದಿ (ATR) ಗಳ ವಿವರಗಳನ್ನು ಸಲ್ಲಿಸಬೇಕೆಂದು ಕೋರಿದರು. ಬಾಕಿ ಇರುವ ಅನುಸರಣಾ ವರದಿ (ATR) ಗಳ ವಿವರಗಳನ್ನು ಸಲ್ಲಿಸಲಾಗುವುದೆಂದು ಕುಲಪತಿಗಳು ತಿಳಿಸಿದರು.

2. ಡಾ. ಗೋವಿಂದರಾಜು ಅವರು ಮಾತನಾಡಿ ಸಿಂಡಿಕೇಟ್ ಸಭೆಯ ವಿಡಿಯೋ ರೆಕಾರ್ಡ್ ಮಾಡಲು ಕ್ರಮ ತೆಗೆದುಕೊಂಡಿರುವುದು ಶ್ಲಾಘನೀಯ. ಮಾನ್ಯ ರಾಜ್ಯಪಾಲರ ಕಾರ್ಯಾಲಯದಿಂದ ಈ ಬಗ್ಗೆ ಬಂದಿರುವ ಸುತ್ತೋಲೆಯನುಸಾರ ಸಿಂಡಿಕೇಟ್ ಸಭೆಯನ್ನು ಕ್ರಮಬದ್ಧವಾಗಿ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಲು ಒಂದು ಸಭೆಯನ್ನು ಆಯೋಜಿಸಬೇಕೆಂದು ತಿಳಿಸಿದರು. ಈ ಬಗ್ಗೆ ಸದಸ್ಯರೊಂದಿಗೆ ಸಭೆ ನಡೆಸಲಾಗುವುದು.

3. ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಮೇಲ್ಕಂಡ ವಿಷಯ ಕುರಿತು ಮಾನ್ಯ ರಾಜ್ಯಪಾಲರ ಕಛೇರಿಗೆ ಬರೆದಿರುವ ಪತ್ರಗಳ ಪ್ರತಿಯನ್ನು ನೀಡಬೇಕೆಂದು ಕೋರಿದರು. ಕುಲಪತಿಗಳು ಉತ್ತರಿಸಿ ಪತ್ರದ ಪ್ರತಿಯನ್ನು ಒದಗಿಸುವುದಾಗಿ ತಿಳಿಸಿದರು.

4. ಡಾ. ಗೋವಿಂದರಾಜು ಹಾಗೂ ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಪಿ.ಹೆಚ್.ಡಿ. ವಿದ್ಯಾರ್ಥಿಗಳು ಸಲ್ಲಿಸಿದ್ದ ಮನವಿಯ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬಯಸಿದರು.

5. ಕುಲಪತಿಗಳು ಮಾತನಾಡಿ, ಡೀನರ ಸಭೆಯಲ್ಲಿ ಚರ್ಚಿಸಿದಂತೆ Interdisciplinary research ಕುರಿತಂತೆ ವಿದ್ಯಾರ್ಥಿಗಳ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಡಾ. ಮುನಿರಾಜಪ್ಪ ಅವರ ಮಾರ್ಗದರ್ಶನದಲ್ಲಿ ಮೂರು ವಿದ್ಯಾರ್ಥಿಗಳನ್ನು Ph.D. ಅಧ್ಯಯನಕ್ಕೆ ಹಂಚಿಕೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ವಾಸವಿರುವ ಜೆ.ಆರ್.ಎಫ್. ವಿದ್ಯಾರ್ಥಿಗಳಿಗೆ ಯು.ಜಿ.ಸಿ ಯಿಂದ ಬರುತ್ತಿರುವ ರೂ.7,500/- ಬಾಡಿಗೆಯಲ್ಲಿ ಹಾಸ್ಟೆಲ್ ಬಾಡಿಗೆಯಾಗಿ ರೂ. 3,000/- ಗಳನ್ನು ಮುರುಗಡೆಮಾಡಿ ಬಾಕಿ ರೂ. 4,500/-ಗಳನ್ನು ವಾಪಸ್ಸು ಮಾಡಲು ಈಗಾಗಲೇ ಕ್ರಮ ವಹಿಸಿದೆಯೆಂದರು. ಇನ್ನು ಪಿ.ಹೆಚ್.ಡಿ. ವಿದ್ಯಾರ್ಥಿಗಳ ಕುಂದುಕೊರತೆಗಳ ಬಗ್ಗೆ Ph.D. Grievance Committee ಸಭೆಯಲ್ಲಿ ಚರ್ಚಿಸಿ ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ.

6. ಡಾ. ಗೋವಿಂದರಾಜು ಹಾಗು ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು Ph.D. Grievance Committee ಹಾಗೂ ಡೀನರ ಸಭೆಯ ನಡಾವಳಿಗಳ ಪ್ರತಿಯನ್ನು ಒದಗಿಸಬೇಕೆಂದರು. ಕುಲಪತಿಗಳು ದಾಖಲೆಗಳನ್ನು ಕುಲಸಚಿವರು(ಮೌಲ್ಯಮಾಪನ) ಅವರು ಒದಗಿಸುತ್ತಾರೆಂದರು.

7. ಕೋವಿಡ್-19 ಕಾರಣದಿಂದಾಗಿ ನಿಗದಿತ 5 ವರ್ಷಗಳ ಅವಧಿಯಲ್ಲಿ ಸಂಶೋಧನಾ ಪ್ರಬಂಧ ಗಳನ್ನು ಸಲ್ಲಿಸಲಾಗದ ಕಾರಣ, ಪ್ರಬಂಧ ಮಂಡಿಸುವ ಅವಧಿಯನ್ನು ವಿಸ್ತರಿಸಲು ಹಾಗೂ ಒಂದು ವರ್ಷ ಹೆಚ್ಚುವರಿಯಾಗಿ ಪಿ.ಹೆಚ್.ಡಿ. ವಿದ್ಯಾರ್ಥಿ ವೇತನ ಮಂಜೂರು ಮಾಡುವ ಬಗ್ಗೆ ವಿದ್ಯಾರ್ಥಿಗಳ ಮನವಿ ಕುರಿತು, ಕುಲಪತಿಗಳು ಮಾತನಾಡಿ, ಪಿ.ಹೆಚ್.ಡಿ. ಅವಧಿಯನ್ನು 7 ವರ್ಷಗಳವರೆಗೆ ವಿಸ್ತರಿಸಲು ಪ್ರಸ್ತುತ ಪಿ.ಹೆಚ್.ಡಿ. ವಿನಿಯಮದಲ್ಲಿ ಅವಕಾಶವಿದೆ. ಈಗಾಗಲೇ ಹಿಂದಿನ ವರ್ಷಗಳಲ್ಲಿ ತೆಗೆದುಕೊಂಡ ನಿರ್ಣಯದಂತೆ 5 ವರ್ಷ ಕೋರ್ಸು ಅವಧಿ ಮೀರಿದ ವಿದ್ಯಾರ್ಥಿಗಳಿಗೆ 6 ತಿಂಗಳು ಕಾಲ ಹೆಚ್ಚಿನ ಅವಧಿಗೆ ಊಟ ವಸತಿ ಒದಗಿಸಲಾಗುತ್ತಿದೆ ಮತ್ತು ಆ ಆರು ತಿಂಗಳ ಅವಧಿಯೊಳಗೆ ಪ್ರಬಂಧ ಮಂಡಿಸಿದಲ್ಲಿ ರೂ.24,000/-ಗಳ ಮೊತ್ತವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ ಎಂದರು.

8. ಡಾ. ಹೆಚ್. ಸುಧಾಕರ್ ಅವರು ಮಾತನಾಡಿ, ಕೋವಿಡ್-19ರ ಅವಧಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಯುಜಿಸಿ ನಿಯಮಾನುಸಾರ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿರುವುದರಿಂದ 5 ವರ್ಷಗಳ ನಂತರ ಸದರಿ ವಿದ್ಯಾರ್ಥಿವೇತನವನ್ನು ಮುಂದುವರೆಸಲು ಸಾಧ್ಯವಿರುವುದಿಲ್ಲವೆಂದರು. ಡಾ. ಗೋವಿಂದರಾಜು, ಶ್ರೀ ಪ್ರೇಮ್ ಸೋಹನ್ ಲಾಲ್ ಮತ್ತು ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, 2015-16ರಲ್ಲಿ Ph.D. ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ Ph.D. ಅವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸುವ ಬಗ್ಗೆ ಒಂದು ಆದೇಶ ನೀಡಿದರೆ ವಿದ್ಯಾರ್ಥಿಗಳಿಗೆ ಸ್ಪಷ್ಟನೆ ನೀಡಿದಂತಾಗುತ್ತದೆ ಎಂದು ತಿಳಿಸಿದರು.

9. ಕುಲಪತಿಗಳು ಉತ್ತರಿಸಿ ವಿದ್ಯಾರ್ಥಿಗಳು ಬೇಡಿಕೆ ಇಟ್ಟಿರುವುದು ಒಂದು ವರ್ಷ ಹೆಚ್ಚುವರಿಯಾಗಿ ಪ್ರತಿ ತಿಂಗಳಿಗೆ ರೂ.22,000/- ದಂತೆ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಬಗ್ಗೆ. ಅದನ್ನು ಪರಿಗಣಿಸಿದರೆ, ಲೆಕ್ಕಪರಿಶೋಧಕರ ಆಕ್ಷೇಪಣೆ ಬರುತ್ತದೆ. ಇದರ ಬದಲಾಗಿ ಪ್ರಸ್ತುತ ಇರುವಂತೆ ಐದು ವರ್ಷಗಳ ನಂತರ ಆರು ತಿಂಗಳ ಅವಧಿಯೊಳಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪಿ.ಹೆಚ್.ಡಿ. ಪ್ರಬಂಧ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ ನೀಡಲಾಗುತ್ತಿರುವ ರೂ.24,000/- ಮೊತ್ತವನ್ನು ಬೇಕಾದರೆ ರೂ. 48,000/- ಕ್ಕೆ ಹೆಚ್ಚಿಸಬಹುದಾಗಿದೆ ಎಂದು ತಿಳಿಸಿದರು.

10. ಕುಲಸಚಿವರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಅವರ ಪ್ರಬಂಧವನ್ನು ಮಂಡಿಸಲು ರೂ.12,000/-ಗಳ ಸಹಾಯ ಧನವನ್ನು ಈಗಾಗಲೇ ನೀಡಲಾಗುತ್ತಿದೆ. ಈ ಮೊತ್ತದೊಂದಿಗೆ ಹೆಚ್ಚುವರಿ ಅವಧಿಗೆ ಸ್ಕಾಲರ್‌ಷಿಪ್ ನೀಡಬೇಕಾದರೆ, ಆಯ-ವ್ಯಯದ ಪುನರ್ ವಿನಿಯೋಗ ಮಾಡಬೇಕಾಗುತ್ತದೆ. ಕೋವಿಡ್-19 ಲಾಕ್-ಡೌನ್ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪಾಕೆಟ್‌ಮನಿ, ಊಟದ ಖರ್ಚು ಮತ್ತು ಫೆಲೋಶಿಪ್ ಮೊತ್ತವನ್ನು ಲೆಕ್ಕ ಹಾಕಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಲಾಗಿದೆ. ಅವರು ಈಗ ಕೇಳುವ ಹೆಚ್ಚುವರಿ ಅವಧಿಗೆ ವಿದ್ಯಾರ್ಥಿ ವೇತನವು ನೈಜತೆಯಿಂದ ಕೂಡಿದ್ದು, ನಿಯಮಾನುಸಾರವಿದ್ದರೆ, ಲೆಕ್ಕಪರಿಶೋಧಕರಿಗೆ ಸೂಕ್ತ ಸಮಜಾಯಿಷಿ ನೀಡಬಹುದಾಗಿದೆ ಎಂದರು.

11. ಪ್ರೊ. ಟಿ.ವಿ. ರಾಜು ಮತ್ತು ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಹಣಕಾಸು ಲಭ್ಯತೆಯ ಬಗ್ಗೆ ವಿತ್ತಾಧಿಕಾರಿಗಳ ಸಲಹೆ ಪಡೆಯಬಹುದಾಗಿದೆ ಎಂದು ತಿಳಿಸಿದರು.

12. ಡಾ. ಗೋವಿಂದರಾಜು ಅವರು ಮಾತನಾಡಿ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ಕುರಿತು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಕಲ್ಯಾಣ ಸಮಿತಿಯಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಕುಲಪತಿಯವರು ಮಾತನಾಡಿ ಎರಡು ವರ್ಷಗಳ ಹಿಂದೆ SCP/TSP ಅಡಿಯಲ್ಲಿ ಸರ್ಕಾರದಿಂದ ಬಂದಿದ್ದ ರೂ.2.00 ಕೋಟಿ ಅನುದಾನ ಹೊರತುಪಡಿಸಿ ಬೇರೆ ಅನುದಾನ ಬಂದಿರುವುದಿಲ್ಲ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕಲ್ಯಾಣಕ್ಕೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಹಣವನ್ನು ಒದಗಿಸಲಾಗುತ್ತಿದೆ. SC/ST Amelioration ಸಮಿತಿ ಸಭೆಯನ್ನು ಕರೆಯಲಾಗದಿರುವುದಕ್ಕೆ ಕಾರಣಗಳನ್ನು ಸಭೆಗೆ ತಿಳಿಸಿದರು.

13. ಕುಲಪತಿಗಳು ಉತ್ತರಿಸಿ ಆಯ-ವ್ಯಯದ ಪುನರ್ ವಿನಿಯೋಗ ಕುರಿತು ನಂತರ ಕ್ರಮ ತೆಗೆದುಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ಕೇಳುತ್ತಿರುವ ಹೆಚ್ಚುವರಿ ಅವಧಿಯ ವಿದ್ಯಾರ್ಥಿ ವೇತನದ ಬಗ್ಗೆ ಅಂತಿಮ ನಿರ್ಧಾರವನ್ನು ಸಿಂಡಿಕೇಟ್ ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

14. ಚರ್ಚೆಯ ನಂತರ, ಕೋವಿಡ್-19ರ ಕಾರಣದಿಂದಾಗಿ 2015-16ನೇ ಸಾಲಿನಲ್ಲಿ ಪ್ರವೇಶ ಪಡೆದು 5 ವರ್ಷಗಳ ಅವಧಿಯೊಳಗೆ ಸಂಶೋಧನಾ ಪ್ರಬಂಧ ಮಂಡಿಸಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ. ವಿನಿಯಮದಂತೆ ಮತ್ತು ಯು.ಜಿ.ಸಿ. ನಿಯಮದಂತೆ ಹೆಚ್ಚುವರಿ ಕಾಲಾವಧಿಯನ್ನು ನೀಡಬೇಕೆಂದು ಹಾಗೂ ಒಂದು ಬಾರಿಯ ಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ

ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ 5 ವರ್ಷಗಳ ನಂತರ 6 ತಿಂಗಳ ಅವಧಿಗೆ ಊಟ ವಸತಿಯನ್ನು ಹಾಗೂ ಪ್ರಬಂಧ ಮಂಡಿಸುವಿಕೆ, ವಾರ್ಷಿಕ ಶುಲ್ಕ, ಕೋರ್ಸ್ ವರ್ಕ್, ಲ್ಯಾಬ್ ಶುಲ್ಕ (ಲ್ಯಾಬ್ ಇಲ್ಲದ ವಿಭಾಗಗಳಿಗೆ ಮಾತ್ರ) ಸೂಕ್ತವಾಗಿ ಕಡಿಮೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ 5 ವರ್ಷಗಳ ನಂತರ ಒಂದು ನಿಗದಿತ ಅವಧಿಯೊಳಗೆ ಪ್ರಬಂಧ ಮಂಡಿಸಬೇಕೆಂಬ ನಿಬಂಧನೆಯೊಳಗೆ ಒಂದು ನಿಗದಿತ ಮೊತ್ತವನ್ನು ವಿದ್ಯಾರ್ಥಿ ವೇತನ ರೂಪದಲ್ಲಿ ನೀಡುವ ಸಂಬಂಧ ಹಾಗೂ ಸೂಕ್ತ ಮೊತ್ತವನ್ನು ನಿಗದಿಪಡಿಸಲು ಅಂತಹ ವಿದ್ಯಾರ್ಥಿಗಳ ಸಂಖ್ಯೆಯ ವಿವರವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಿಂಡಿಕೇಟ್ ಸೂಚಿಸಿತು.

15. ಪ್ರೊ. ಟಿ ವಿ ರಾಜು ಅವರು ಸದರಿ ವಿದ್ಯಾರ್ಥಿಗಳು ಐದು ವರ್ಷಗಳ ಅವಧಿಯಲ್ಲಿ ನಡೆಸಿರುವ ಸಂಶೋಧನಾ ಕಾರ್ಯದ ಬಗ್ಗೆ ಸಂಬಂಧಪಟ್ಟ ಮಾರ್ಗದರ್ಶಕರಿಂದ ಮಾಹಿತಿ ಪಡೆಯುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟರು.

16. ಪ್ರೊ. ಟಿ.ವಿ. ರಾಜು ಅವರು ಮುಂದುವರೆದು ಮಾತನಾಡಿ, ಕಾಲಕಾಲಕ್ಕೆ ಪಿ.ಆರ್.ಸಿ. ಸಭೆ ನಡೆಸದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಈ ಬಗ್ಗೆ ಕ್ರಮ ತೆಗೆದುಕೊಂಡಿರುವುದಿಲ್ಲ. ಹೆರಿಗೆ ಆಗಿ ಎರಡು ದಿವಸ ಆಗಿರುವ ಪಿ.ಹೆಚ್.ಡಿ. ವಿದ್ಯಾರ್ಥಿನಿಯೊಬ್ಬರ ಪರವಾಗಿ ಅವರ ಸಂಬಂಧಿಕರು ಸದರಿ ವಿದ್ಯಾರ್ಥಿನಿಯ ಪಿ.ಹೆಚ್.ಡಿ. ಅಧ್ಯಯನ ಸಂಬಂಧ ಪ್ರೊಗ್ರೆಸ್ ರಿಪೋರ್ಟ್ ಸಲ್ಲಿಸಲು ಬಂದಂತಹ ಸಂದರ್ಭದಲ್ಲಿ, ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ಸರಿಯಾದ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲವೆಂದು ಸದರಿ ವಿದ್ಯಾರ್ಥಿನಿಯು ತಮ್ಮ ಗಮನಕ್ಕೆ ತಂದಿರುವ ವಿಷಯವನ್ನು ಈಗಾಗಲೇ ಕುಲಸಚಿವರು(ಮೌಲ್ಯಮಾಪನ) ಇವರಿಗೆ ತಿಳಿಸಲಾಗಿದೆ. ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಕುಲಸಚಿವರು(ಮೌಲ್ಯಮಾಪನ) ಅವರು ಮಾತನಾಡಿ ನಿಗದಿತ ಅವಧಿಯೊಳಗೆ ಪಿ.ಆರ್.ಸಿ. ಸಭೆ ನಡೆಸಲು ಎಲ್ಲಾ ಪ್ರಯತ್ನ ಮಾಡುತ್ತಿದ್ದು, ಕೋವಿಡ್-19ರ ಅವಧಿಯಲ್ಲಿ ಹೊರಗಿನ ವಿಷಯ ತಜ್ಞರ ಅಲಭ್ಯತೆಯ ಸಂದರ್ಭದಲ್ಲಿ ಪಿ.ಆರ್.ಸಿ. ಸಭೆ ನಡೆಯುವುದು ವಿಳಂಬವಾಗಿದೆ ಎಂದು ತಿಳಿಸಿ, ಪ್ರೊ. ಟಿ.ವಿ.ರಾಜು ಅವರು ಉಲ್ಲೇಖಿಸಿದ ಪ್ರಕರಣದ ಬಗ್ಗೆ ಲಿಖಿತವಾಗಿ ವಿದ್ಯಾರ್ಥಿನಿಯಿಂದ ಮನವಿ ಬಂದಿರುವುದಿಲ್ಲವೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ, ಈ ಬಗ್ಗೆ ನನ್ನ ಗಮನಕ್ಕೆ ವಿಷಯ ಮೊದಲೇ ಬಂದಿದ್ದರೆ ಕ್ರಮ ತೆಗೆದುಕೊಳ್ಳುತ್ತಿದ್ದೆ. ಇಂತಹ ವಿಷಯಗಳನ್ನು ಬಗೆಹರಿಸುವುದಕ್ಕಾಗಿ Ph.D. Grievances Committee ರಚಿಸಲಾಗಿದೆ ಎಂದರು. ಪಿ.ಆರ್.ಸಿ. ಸಭೆ ನಡೆಯದಿದ್ದರೂ ಸಹ ಆ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಪಿ.ಹೆಚ್.ಡಿ. ಪ್ರಬಂಧವನ್ನು ಮಂಡಿಸಲು ಅನುಮತಿ ನೀಡುವ ಬಗ್ಗೆ

ಕುಲಪತಿಗಳಿಗೆ ಅಧಿಕಾರವಿದೆ. ಆದಕಾರಣ, ಸದರಿ ವಿದ್ಯಾರ್ಥಿನಿಯ ಮನವಿಯ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆಯೆಂದರು.

17. ಶ್ರೀ ಗೋಪಿನಾಥ್ ಮತ್ತು ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ ವಿದ್ಯಾರ್ಥಿಗಳು ಅವರ ಸಮಸ್ಯೆಗಳನ್ನು ಕೆಲವೊಮ್ಮೆ ಲಿಖಿತರೂಪದಲ್ಲಿ ಸಲ್ಲಿಸಲು ತೊಂದರೆಗಳಿರುತ್ತದೆ, ಆದ್ದರಿಂದ ಅಂತಹ ವಿಷಯಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಿದರು.

18. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯ ಮೆರಿಟ್ ಲಿಸ್ಟ್ ಸಂಬಂಧ, ಶಿಕ್ಷಣ ವಿಭಾಗದ ಅಭ್ಯರ್ಥಿಗಳು ಸಲ್ಲಿಸಿದ್ದ ಆಕ್ಷೇಪಣೆಗೆ ಉತ್ತರ ನೀಡಿಲ್ಲವೆಂದು ತಿಳಿಸಿದರು. ಈ ಬಗ್ಗೆ ಕುಲಸಚಿವರು (ಮೌಲ್ಯಮಾಪನ) ಅವರು ಸದರಿ ವಿದ್ಯಾರ್ಥಿಗಳಿಗೆ ಉತ್ತರ ನೀಡುವುದಾಗಿ ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮುಂದುವರೆದು, ಗಂಧದ ಮರಗಳ ಕಳ್ಳತನ ತಡೆಗಟ್ಟುವ ಕುರಿತಂತೆ Wood Science & Technology Instituteಗೆ ಬರೆದಿರುವ ಪತ್ರದ ಪ್ರತಿಯನ್ನು ನೀಡಲು ಕೋರಿ ಹಾಗೂ ಗಂಧದ ಮರ ತಡೆಗಟ್ಟುವ ನಿಟ್ಟಿನಲ್ಲಿ ಮಾಹಿತಿಗಳನ್ನು ಬಯಸಿದರು. ಅವರು ಮುಂದುವರೆದು, ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಕ್ಯಾಂಪಸ್ ಅನ್ನು ಡಿಜಿಟಲ್ ಸರ್ವೆ ಮಾಡಿಸಲು ಸಿಂಡಿಕೇಟ್ ಈಗಾಗಲೇ ಅನುಮೋದಿಸಿದ್ದರೂ ಕೂಡ ಈ ಬಗ್ಗೆ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿದರು.

19. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಬಯೋ-ಪಾರ್ಕ್ ಆವರಣದಲ್ಲಿ ಬೆಲೆ ಬಾಳುವ ಮರಗಳನ್ನು ಕಡಿದಿದ್ದಾರೆ. ಈ ಬಗ್ಗೆ ಕಳ್ಳತನ ಆಗದಂತೆ ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸಲಹೆ ನೀಡಿದರು.

20. ಕುಲಪತಿಗಳು ಮಾತನಾಡಿ ಕ್ಯಾಂಪಸ್ ಆವರಣದಲ್ಲಿ ಸೆಕ್ಯುರಿಟಿ ವ್ಯವಸ್ಥೆ ಮಾಡಲಾಗಿದ್ದರೂ ಸಹ ಗಂಧದ ಮರಗಳ ಕಳ್ಳತನದ ಪ್ರಕರಣಗಳು ನಡೆಯುತ್ತಿವೆ. ಕಾರಣ ಎಲ್ಲಾ ದಿಕ್ಕುಗಳಿಂದಲೂ ರಸ್ತೆಗಳು ಹಾದು ಹೋಗುತ್ತಿರುವುದರಿಂದ, ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರುವ ಕಾರಣ ಕಳ್ಳತನದ ಪ್ರಕರಣಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು. ಅವರು ಮುಂದುವರೆದು ಕ್ಯಾಂಪಸ್ ಆವರಣದ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಲು ಅಂದಾಜು ವಿವರಗಳನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಮಂಡಿಸಲಾಗಿದೆ. Wood Science & Technology Instituteಗೆ ಪತ್ರ ಬರೆದು ಗಂಧದ ಮರಗಳಿಗೆ ಚಿಪ್ ಅಳವಡಿಸುವ ಬಗ್ಗೆ ಸಹಕಾರ ಕೋರಲಾಗಿದೆ. ಇದರಿಂದಾಗಿ ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಸಹಕಾರಿಯಾಗಬಹುದೆಂದರು. ಅವರು ಮುಂದುವರೆದು ರೋಟರಿಯವರು ಖಾಸಗಿ ಸಂಸ್ಥೆಯಿಂದ ಡಿಜಿಟಲ್ ಸರ್ವೆ ಮಾಡಿಸಿದ್ದಾರೆ. ಆದರೆ, ಅದರ ವೆಚ್ಚ ಹೆಚ್ಚಿಗೆ ಇರುವುದರಿಂದ

ಅವರು ರೂ.5.00 ಲಕ್ಷಗಳ ಒಳಗೆ ಮೊತ್ತವನ್ನು ನಿಗದಿಪಡಿಸಿ ಸದರಿ ಸರ್ವೆ ರೆಕಾರ್ಡ್ ಅನ್ನು ಸಲ್ಲಿಸುವುದಾದರೆ ಮರಗಳನ್ನು ಗುರುತಿಸಲು ವಿಶ್ವವಿದ್ಯಾಲಯಕ್ಕೆ ಅನುಕೂಲವಾಗಬಹುದು ಎಂದು ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಡಿಜಿಟಲ್ ಸರ್ವೆ ಮೊತ್ತವು ರೂ.5.00 ಲಕ್ಷಗಳಿಗಿಂತ ಹೆಚ್ಚಿಗೆ ಇದ್ದರೆ ಕಡಿಮೆ ಅವಧಿಯ ಟೆಂಡರ್ ಅನ್ನು ಹೊರಡಿಸಿ, ಡಿಜಿಟಲ್ ಸರ್ವೆ ಮಾಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಚರ್ಚೆಯ ನಂತರ ರೋಟರಿ ಸಂಸ್ಥೆ ಹಾಗೂ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಈಗಾಗಲೇ ಮಾಡಿರುವ ಡಿಜಿಟಲ್ ಸರ್ವೆ ಡಾಕ್ಯುಮೆಂಟ್ ಅನ್ನು ವಿಶ್ವವಿದ್ಯಾಲಯಕ್ಕೆ ರೂ.5.00 ಲಕ್ಷಗಳಿಗಿಂತ ಕಡಿಮೆ ಮೊತ್ತಕ್ಕೆ ನೀಡುವುದಾದರೆ, ಸದರಿ ಮೊತ್ತವನ್ನು ಪಾವತಿಸಿ, ಸದರಿ ಡಿಜಿಟಲ್ ಸರ್ವೆ ರೆಕಾರ್ಡ್ ಡಾಕ್ಯುಮೆಂಟ್ ಅನ್ನು ಪಡೆದುಕೊಳ್ಳಬೇಕು ಅಥವಾ ರೂ.5.00 ಲಕ್ಷಗಳಿಗಿಂತ ಹೆಚ್ಚಿನ ಮೊತ್ತ ಕೋರಿದ್ದಲ್ಲಿ ಹೊಸದಾಗಿ ಕಡಿಮೆ ಅವಧಿಯ ಟೆಂಡರ್ ಅನ್ನು ಹೊರಡಿಸಿ, ಮತ್ತೊಮ್ಮೆ ಡಿಜಿಟಲ್ ಸರ್ವೆ ಮಾಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

21. ಶ್ರೀ ಗೋಪಿನಾಥ್ ಅವರು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯದ ಇತರೆ ಕಟ್ಟಡಗಳಿಗೆ ಹೆಸರು ಇಡುವ ಸಂಬಂಧ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ಬಯಸಿದರು. ಕುಲಪತಿಯವರು ಮಾತನಾಡಿ ಅನಧಿಕೃತವಾಗಿ ನಾಮಫಲಕ ಹಾಕಿದವರ ಮೇಲೆ ಎಫ್.ಐ.ಆರ್ ಹಾಕಬೇಕು. ಈ ಹಿಂದಿನ ಸಭೆಯಲ್ಲಿ ರಚಿಸಿರುವ ಸಮಿತಿಯು ವಿಶ್ವವಿದ್ಯಾಲಯದ ಕಟ್ಟಡಗಳಿಗೆ ಹೆಸರು ಇಡುವ ಬಗ್ಗೆ ವರದಿ ನೀಡಬೇಕೆಂದರು.

22. ಬೆಂಗಳೂರು ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಬಾಬಾ ಸಾಹೇಬ್ ಡಾ|| ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಅಧಿಕೃತವಾಗಿ ಇಡುವ ಸಂಬಂಧ ಸಮಾರಂಭದ ರೂಪು ರೇಷೆಗಳನ್ನು ಸಿದ್ಧಪಡಿಸಲು ರಚಿಸಿರುವ ಸಿಂಡಿಕೇಟ್ ಉಪಸಮಿತಿಯ ಅಧಿಸೂಚನೆಯನ್ನು ಆದಷ್ಟು ಬೇಗ ಹೊರಡಿಸಬೇಕೆಂದು ಹಾಗೂ ಸದರಿ ಸಮಿತಿಗೆ ಶ್ರೀ ಬಿ.ಟಿ. ಚಂದ್ರಶೇಖರ್, ವಿಶ್ವವಿದ್ಯಾಲಯದ ಅಭಿಯಂತರರು ಇವರನ್ನು ಸಂಚಾಲಕರನ್ನಾಗಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ನಿರ್ಣಯಿಸಿತು. ಸದರಿ ಸಮಿತಿಯು ಬೇರೆ ಕಟ್ಟಡಗಳಿಗೆ ಹೆಸರು ಇಡುವ ಬಗ್ಗೆ ಕೂಡ ವರದಿ ನೀಡಬಹುದೆಂದು ಅಭಿಪ್ರಾಯ ಪಡಲಾಯಿತು.

23. ಬ್ಯಾಕ್-ಲಾಗ್ ಹುದ್ದೆಗಳ ನೇಮಕಾತಿ ಕುರಿತು ಪ್ರಕ್ರಿಯೆ ಪ್ರಗತಿ ಬಗ್ಗೆ ಡಾ. ಗೋವಿಂದರಾಜು ಅವರು ಕೋರಿದ ಮಾಹಿತಿಯ ಬಗ್ಗೆ ವಿವರಿಸಿ, ಮಾನ್ಯ ರಾಜ್ಯಪಾಲರ ಕಛೇರಿಯಿಂದ ಬಂದ ನಿರ್ದೇಶನದನುಸಾರ ಎಲ್ಲಾ ನೇಮಕಾತಿಗಳಿಗೆ ಹಾಗೂ ಈಗಾಗಲೇ ಹುದ್ದೆಗಳನ್ನು ಭರ್ತಿ ಮಾಡಲು ಜಾಹೀರಾತು ನೀಡಿದ್ದರೆ, ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮತಿ ಕೋರಿ ಪತ್ರ ಬರೆದಿರುವುದು ಹಾಗೂ 'ಸರ್ಕಾರಕ್ಕೂ' ಕೂಡ ಸದರಿ

ವಿಷಯದಲ್ಲಿ ಮಾಹಿತಿ ನೀಡಿ ಸರ್ಕಾರ ಹೊರಡಿಸಿರುವ ವಿಶೇಷ ನೇಮಕಾತಿ ನಿಯಮವನ್ನು ಅನುಸರಿಸಬೇಕೆ ಅಥವಾ ಯು.ಜಿ.ಸಿ. ನಿಯಮಾವಳಿಯನ್ನು ಅನುಸರಿಸಬೇಕೆ ಎಂಬುದರ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಬೇಕೆಂದು ಸರ್ಕಾರವನ್ನು ಕೋರಿರುವ ಬಗ್ಗೆ ಕುಲಪತಿಗಳು ಮಾಹಿತಿ ನೀಡಿದರು.

24. ಡಾ. ಸುಧಾಕರ ಹೆಚ್, ಶ್ರೀ ಉದಯ ಕುಮಾರ್ ಎಂ, ಮತ್ತು ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಡಾ. ಸತೀಶ್ ಗೌಡ ಅವರು ಪತ್ರಿಕಾ ಹೇಳಿಕೆ ನೀಡಿರುವ ಬಗ್ಗೆ, ಹಿಂದಿನ ಸಿಂಡಿಕೇಟ್ ನಿರ್ಣಯದಂತೆ ನೋಟೀಸ್ ಜಾರಿ ಮಾಡಿ ಕ್ರಮ ತೆಗೆದುಕೊಂಡಿರುವ ಬಗ್ಗೆ ಮಾಹಿತಿ ಬಯಸಿದರು. ಡಾ. ಗೋವಿಂದರಾಜು ಅವರು ಮಾತನಾಡಿ ಸಿಂಡಿಕೇಟ್ ನಿರ್ಣಯವು ವಿಶ್ವವಿದ್ಯಾಲಯದ ಪರಿನಿಯಮದನುಸಾರ ಇದೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದರು. ಕುಲಪತಿಗಳು ಉತ್ತರಿಸಿ, ಕೆಲವು ಸಿಂಡಿಕೇಟ್ ಸದಸ್ಯರುಗಳ ಖಾಸಗಿ ಸಮಾಲೋಚನಾ ಸಭೆಯಲ್ಲಿ ನಡೆದಂತಹ ಘಟನೆಗೆ ನಾನು ಭಾಗೀದಾರನಲ್ಲ. ಈ ವಿಷಯದಲ್ಲಿ ಕಾನೂನು ಸಲಹೆಗಾರರ ನೇಮಕವಾದ ನಂತರ ಈ ವಿಷಯದ ಬಗ್ಗೆ ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

25. ಡಾ. ಗೋವಿಂದರಾಜು ಅವರು ಮಾತನಾಡಿ ಡಾ. ರಾಜಪ್ಪ ದಳವಾಯಿ ಅವರ ಪದೋನ್ನತಿ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿ ಬಯಸಿದರು. ಕುಲಪತಿಗಳು ಉತ್ತರಿಸಿ, ಸಂಬಂಧಪಟ್ಟ ಕಡತದಲ್ಲಿ ವಿಷಯವನ್ನು ನೇಮಕಾತಿ ಮಂಡಳಿ ಮುಂದೆ ಮಂಡಿಸಲು ಅಗತ್ಯ ಕ್ರಮತೆಗೆದುಕೊಳ್ಳಲು ಸೂಚಿಸಲಾಗಿದೆಯೆಂದು ತಿಳಿಸಿದರು.

26. ಶ್ರೀ ಗೋಪಿನಾಥ್ ಅವರು ಮಾತನಾಡಿ ಬೋಧನಾ ಕೊಠಡಿಗಳನ್ನು ಸ್ಮಾರ್ಟ್ ಕ್ಲಾಸ್ ಮಾಡಲು Technical specification ಪಡೆದುಕೊಳ್ಳಲು ರಚಿಸಿರುವ ಸಮಿತಿಗೆ ಅವರನ್ನು ಸದಸ್ಯರನ್ನಾಗಿ ಮಾಡಿದ್ದು, ಸದರಿ ಸಮಿತಿಯ ಸಭೆ ನಡೆದಿರುವುದಿಲ್ಲವೆಂದು ತಿಳಿಸಿದರು. ಸದರಿ ಸಮಿತಿಯ ಮತ್ತೊಬ್ಬ ಸದಸ್ಯರಾದ ಪ್ರೊ. ಜಯಕುಮಾರ್ ಜಿ ರೆಡ್ಡಿ ಅವರು ಮಾತನಾಡಿ, ಈ ಸಮಿತಿಯು ಒಂದು ಪೂರ್ವಭಾವಿ ಚರ್ಚೆ ನಡೆದಿದ್ದು. ಸದ್ಯದಲ್ಲೇ ಸಭೆ ನಡೆಯುತ್ತದೆ ಎಂದು ಸದಸ್ಯರ ಗಮನಕ್ಕೆ ತಂದರು.

27. ಡಾ. ಸುಧಾಕರ ಹೆಚ್, ಅವರು ಮಾತನಾಡಿ, ಹಾಸ್ಟೆಲ್‌ಗಳಿಗೆ ಕ್ಷೇಮಪಾಲಕರನ್ನು ನೇಮಕಾತಿ ಮಾಡಿರುವುದಿಲ್ಲವೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ ಈಗಾಗಲೇ ಅರ್ಜಿ ಕರೆದಿದ್ದು, ಕೆಲವೇ ಕೆಲವು ಪ್ರಾಧ್ಯಾಪಕರುಗಳು ವಾರ್ಡನ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

28. ಡಾ. ಗೋವಿಂದರಾಜು ಅವರು ಮಾತನಾಡಿ, ನ್ಯಾಕ್ ಮರು–ಮೌಲ್ಯಮಾಪನದ ಸಿದ್ಧತಾ ಕಾರ್ಯಕ್ಕೆ ಹಾಗೂ ಎಸ್.ಎಸ್.ಆರ್. ವರದಿ ತಯಾರಿಸಲು ರಚಿಸಿರುವ ಸಮಿತಿಗೆ ಅವರನ್ನು ಸದಸ್ಯರನ್ನಾಗಿ ಮಾಡಲಾಗಿದೆ. ಆದಕಾರಣ ಇದನ್ನು ಬದಲಿಸಿ, ಸಿಂಡಿಕೇಟ್ ಸದಸ್ಯರನ್ನು ಸದರಿ ಸಮಿತಿಗೆ ಸಲಹೆಗಾರರಾಗಿ ನಾಮ ನಿರ್ದೇಶನ ಮಾಡಬೇಕೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ ಸೂಕ್ತ ತಿದ್ದುಪಡಿ ಆದೇಶ ಹೊರಡಿಸುವುದಾಗಿ ತಿಳಿಸಿದರು.

29. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವಾರ್ಷಿಕ ಘಟಿಕೋತ್ಸವ ನಡೆಸುವಲ್ಲಿ ಸಾಕಷ್ಟು ವಿಳಂಬವಾಗಿದೆ. ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

30. ಕುಲಪತಿಗಳು ಮಾತನಾಡಿ, ಚಿನ್ನದ ಪದಕ Finalize ಮಾಡಲಿಕ್ಕೆ ಸಾಧ್ಯವಾಗದ ಕಾರಣ ಘಟಿಕೋತ್ಸವ ನಡೆಯುವುದು ತಡವಾಗಿದೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಾಧೀಶರನ್ನು ಸಂಪರ್ಕಿಸಲಾಗಿತ್ತು. ಆದರೆ, ಅವರು ವರ್ಗಾವಣೆಗೊಂಡಿರುತ್ತಾರೆ. ಪ್ರಸ್ತುತ ಮುಖ್ಯ ನ್ಯಾಯಾಧೀಶರನ್ನು ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿದೆ. ನಿರ್ದೇಶಕರು, ಬಾಬಾ ಪರಮಾಣು ಸಂಶೋಧನಾ ಕೇಂದ್ರ, ಮುಂಬೈ ಇವರನ್ನು ಸಹ ಸಂಪರ್ಕಿಸಲಾಗಿದೆ. ಅವರುಗಳು ಒಪ್ಪದಿದ್ದಲ್ಲಿ ಈಗಾಗಲೇ ಸಿಂಡಿಕೇಟ್ ಅನುಮೋದಿಸಿರುವಂತೆ ಡಾ. ಸುಧಾ ಮೂರ್ತಿಯವರನ್ನು ಆಹ್ವಾನಿಸಲು ಅನುಮೋದನೆ ಕೋರಿದರು. ಮುಂದುವರೆದು, ಗೌರವ ಡಾಕ್ಟರೇಟ್ ಪದವಿ ನೀಡಲು ಗಣ್ಯರು/ಸಾಧಕರ ಹೆಸರುಗಳನ್ನು ಅಂತಿಮಗೊಳಿಸುವ ಸಂಬಂಧ ಮಾನ್ಯ ರಾಜ್ಯಪಾಲರು ರಚಿಸುವ Experts Scrutiny Committee ಗೆ ಡಾ. ಪಿ ಸುಬ್ರಹ್ಮಣ್ಯ ಯಡಪಡಿತಾಯ, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ ಅವರನ್ನು ವಿಶ್ವವಿದ್ಯಾಲಯದಿಂದ ನಾಮನಿರ್ದೇಶನ ಮಾಡಲು ಅನುಮೋದನೆ ನೀಡಬೇಕೆಂದು ಕೋರಿದರು. ಅವರು ಮುಂದುವರೆದು, 56ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರಧಾನ ಮಾಡಬೇಕೆಂದು ಕೆಲವು ಗಣ್ಯರ ಹೆಸರುಗಳನ್ನು ಸೂಚಿಸಿ ಶಿಫಾರಸ್ಸು ಪತ್ರಗಳು ಬಂದಿವೆ ಎಂದು ತಿಳಿಸಿ, ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಸಹ ಗಣ್ಯರು/ಸಾಧಕರ ಹೆಸರುಗಳನ್ನು ಕಳುಹಿಸಿಕೊಟ್ಟರೆ ಮಾನ್ಯ ರಾಜ್ಯಪಾಲರು ರಚಿಸುವ Experts Scrutiny Committeeಯ ಪರಿಗಣನೆಗಾಗಿ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಚರ್ಚೆಯ ನಂತರ, 159ನೇ ಸಿಂಡಿಕೇಟ್ ಸಭೆಯಲ್ಲಿ ಶಿಫಾರಸ್ಸು ಮಾಡಲಾದ ಗಣ್ಯರು ಸೇರಿ, ನಿರ್ದೇಶಕರು, ಬಾಬಾ ಪರಮಾಣು ಸಂಶೋಧನಾ ಕೇಂದ್ರ, ಮುಂಬೈ ಇವರನ್ನು 56ನೇ ವಾರ್ಷಿಕ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ಮತ್ತು ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಸಂಬಂಧ ಮಾನ್ಯ ರಾಜ್ಯಪಾಲರು ರಚಿಸುವ Experts

Scrutiny Committeeಗೆ ಡಾ॥ ಪಿ ಸುಬ್ರಹ್ಮಣ್ಯ ಯಡಪಡಿತಾಯ, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ ಅವರನ್ನು ವಿಶ್ವವಿದ್ಯಾಲಯದಿಂದ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು ಸಿಂಡಿಕೇಟ್ ಸದಸ್ಯರುಗಳು, ಗೌರವ ಡಾಕ್ಟರೇಟ್ ಪದವಿ ನೀಡಲು ಗಣ್ಯರು ಮತ್ತು ಸಾಧಕರುಗಳ ಹೆಸರನ್ನು ಏಳು ದಿನಗಳ ಒಳಗಾಗಿ ಕಳುಹಿಸಿಕೊಡಬೇಕೆಂದು ಹಾಗೂ ಈಗಾಗಲೇ ವಿಶ್ವವಿದ್ಯಾಲಯಕ್ಕೆ ಗೌರವ ಡಾಕ್ಟರೇಟ್ ನೀಡಬೇಕೆಂದು ಶಿಫಾರಸ್ಸು ಮಾಡಿ ಬಂದಿರುವ ಪ್ರಸ್ತಾವನೆಗಳ ಜೊತೆಗೆ ಮಾನ್ಯ ಸದಸ್ಯರುಗಳು ಕಳುಹಿಸುವ ಎಲ್ಲಾ ಹೆಸರುಗಳನ್ನು ಮಾನ್ಯ ರಾಜ್ಯಪಾಲರು ರಚಿಸುವ ಸಮಿತಿಯ ಪರಿಗಣನೆಗೆ ಕಳುಹಿಸಲು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

31. ಹಾಸ್ಟೆಲ್ ಸೌಲಭ್ಯಗಳ ಬಗ್ಗೆ ಶ್ರೀ ಎಂ ಉದಯ ಕುಮಾರ್ ಮತ್ತು ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಅವರುಗಳು ಹಾಸ್ಟೆಲ್‌ಗೆ ಭೇಟಿ ನೀಡಿದ ಸಂದರ್ಭಗಳಲ್ಲಿ, ಹಾಸ್ಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ಹಾಜರಿರಲಿಲ್ಲ. ಪೇಯಿಂಗ್ ಹಾಸ್ಟೆಲ್‌ಗೆ ಹೋಲಿಸಿದರೆ ಇತರೆ ಹಾಸ್ಟೆಲ್‌ಗಳಲ್ಲಿ ಅಡುಗೆ ಪದಾರ್ಥಗಳ ಗುಣಮಟ್ಟ ಕಳಪೆ ಇದ್ದುದು ಕಂಡುಬಂತು ಹಾಗೂ ಮೂಲ ಸೌಕರ್ಯಗಳ ಕೊರತೆ ಇದೆ. ಆದ್ದರಿಂದ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಹಾಸ್ಟೆಲ್‌ಗಳಲ್ಲಿ ಕಂಪ್ಯೂಟರ್ ಮತ್ತು ಲಾಂಗ್ವೇಜ್ ಲ್ಯಾಬ್ ಸೃಜಿಸಲು ಕ್ರಮ ಕೈಗೊಳ್ಳಬೇಕೆಂದರು.

ಕುಲಪತಿಗಳು ಮಾತನಾಡಿ ಈಗಾಗಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿ, ಇನ್ನೂ ಹೆಚ್ಚಿನ ಸೌಕರ್ಯ ಒದಗಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

32. ಬ್ಯಾಂಕ್ ಸೇವೆಗಳನ್ನು ಪಡೆಯುವ ಸಂಬಂಧ ರಚಿಸುವ ಸಮಿತಿಯನ್ನು ದಿನಾಂಕ:17–11–2021 ಅಥವಾ 18–11–2021ರಂದು ಕರೆಯಬೇಕೆಂದು ಸಂಬಂಧಪಟ್ಟ ಕಡತದಲ್ಲಿ ಸೂಚನೆ ನೀಡಲಾಗಿದೆ ಎಂದು ಸದಸ್ಯರಾದ ಶ್ರೀ ಪ್ರೇಮ್ ಸೋಹನ್ ಲಾಲ್ ಅವರ ಪ್ರಶ್ನೆಗೆ ಕುಲಪತಿಗಳು ಉತ್ತರಿಸಿದರು.

33. ಶ್ರೀ ಗೋವಿಂದರಾಜು ಅವರು ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿಸೂಚನೆಯ ಪ್ರತಿ ಹಾಗೂ ಕಳೆದ ಸಿಂಡಿಕೇಟ್ ಸಭೆಯಲ್ಲಿ Inter University Yogic Science ಗೆ ಸಂಬಂಧಿಸಿದಂತೆ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಪಟ್ಟಂತೆ ಬೆಂಗಳೂರು ವಿಶ್ವವಿದ್ಯಾಲಯ ಸಲ್ಲಿಸಿರುವ Statement of Objection ಸಲ್ಲಿಸಿರುವ ಪ್ರತಿ ಹಾಗೂ ಬ್ಯಾಕ್‌ಲಾಗ್ ನೇಮಕಾತಿ ಕುರಿತು ಸರ್ಕಾರಕ್ಕೆ ಒದಗಿಸಿರುವ ದಾಖಲೆಗಳ ಪ್ರತಿಗಳನ್ನು ಇನ್ನೂ ನೀಡಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಉಚ್ಚನ್ಯಾಯಾಲಯದಲ್ಲಿ ಇನ್ನೂ ಮೇಲ್ಕಂಡ ಪ್ರಕರಣದಲ್ಲಿ Statement of Objection ಅನ್ನು ಇನ್ನೂ ಹಾಕಬೇಕಾಗಿದೆ. Statement of Objection

ಅನ್ನು ಹಾಕಿದ ನಂತರ ಮೇಲ್ಕಂಡ ದಾಖಲೆಗಳ ಪ್ರತಿಯನ್ನು ಒದಗಿಸಲು ಸಂಬಂಧಪಟ್ಟ ವಿಭಾಗಕ್ಕೆ ಸೂಚಿಸಲಾಗುವುದು.

34. ಶ್ರೀ ಪ್ರೇಮ್ ಸೋಹನ್ ಲಾಲ್ ಹಾಗೂ ಶ್ರೀ ಗೋಪಿನಾಥ್ ಅವರು ಮಾತನಾಡಿ ISKCON ಅವರಿಂದ ಊಟದ ವ್ಯವಸ್ಥೆ ಮಾಡುವ ಬಗ್ಗೆ ಅವರೊಂದಿಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಈ ಬಗ್ಗೆ ಪ್ರಯತ್ನಿಸುವುದಾಗಿ ತಿಳಿಸಿದರು. ಮುಂದುವರೆದು, ಕ್ಯಾಂಪಸ್ ಸ್ವಚ್ಛತೆಯ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಲು ಅನುಮೋದನೆ ನೀಡುವುದಾಗಿ ಸದಸ್ಯರುಗಳಿಗೆ ತಿಳಿಸಿದರು.

35. ಡಾ. ಗೋವಿಂದರಾಜು ಅವರು ಮಾತನಾಡಿ, 158ನೇ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹೆಸರು ನಮೂದಿಸಿ ಮರು–ಮುದ್ರಿಸಿ ಇನ್ನೂ ಕಳುಹಿಸಿಕೊಟ್ಟಿರುವುದಿಲ್ಲವೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ, ಸದರಿ ನಡಾವಳಿಗಳನ್ನು ಮರು–ಮುದ್ರಿಸಿ ಕೊಡಲಾಗುವುದು ಎಂದು ತಿಳಿಸಿದರು.

36. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ M/s MSIL ನಿಂದ Non-Tearable ಅಂಕಪಟ್ಟಿಗಳನ್ನು ಖರೀದಿಸುವ ಬಗ್ಗೆ ಆದ ಚರ್ಚೆಯನ್ನು ಉಲ್ಲೇಖಿಸಿ, ಡಿಸೆಂಬರ್ 2020ರಲ್ಲಿ ಟೆಂಡರ್ ಕರೆದು ನಾಲ್ಕೈದು ತಿಂಗಳ ನಂತರ ಟೆಂಡರ್‌ದಾರರಲ್ಲಿ ಒಬ್ಬ ಬಿಡ್‌ದಾರರನ್ನು Disqualify ಮಾಡಿರುತ್ತೀರಿ. Security Features ಇರುವ Non-Tearable ಅಂಕಪಟ್ಟಿಗಳನ್ನು ನೀಡಬೇಕೆಂದು ಯು.ಜಿ.ಸಿ. ಕಾರ್ಯದರ್ಶಿಗಳು ದಿನಾಂಕ: 24–09–2019 ರಂದು ಹಾಗೂ ಸರ್ಕಾರದಿಂದ ದಿನಾಂಕ: 04–02–2021 ರಂದು M/s MSILನಿಂದ Non-Tearable ಅಂಕಪಟ್ಟಿಗಳನ್ನು ಖರೀದಿಸಬೇಕೆಂದು ನಿರ್ದೇಶನ ಬಂದಿದೆ. ಆದಕಾರಣ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ Non-Tearable ಅಂಕಪಟ್ಟಿಗಳನ್ನು ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ ವಿದ್ಯಾರ್ಥಿಗಳಿಗೆ ನೀಡಬೇಕೆಂದು ತಿಳಿಸಿದರು. ಶ್ರೀ ಉದಯ ಕುಮಾರ್.ಎಂ ಅವರು ಮಾತನಾಡಿ, ಮಾನ್ಯ ರಾಜ್ಯಪಾಲರ ಕಾರ್ಯಾಲಯದೊಂದಿಗೆ ಪತ್ರ ವ್ಯವಹರಿಸಿ, ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೋರಿದರು. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ L1 ಬಿಡ್‌ದಾರರಿಗೆ ಆದೇಶ ಕೊಡಬೇಕಾಗುತ್ತದೆ ಎಂದರು.

37. ಡಾ. ಗೋವಿಂದರಾಜು ಮತ್ತು ಶ್ರೀ ಉದಯ ಕುಮಾರ್ ಎಂ ಅವರು ಮಾತನಾಡಿ, ನಿಗಧಿತ ಅವಧಿಯೊಳಗೆ ಕ್ರಮ ತೆಗೆದುಕೊಂಡಿದ್ದರೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರಲಿಲ್ಲ. ಟೆಂಡರ್

ಕರೆದ ಮೇಲೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಾಗಿತ್ತು. Non-Tearable ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ನೀಡಬೇಕು ಹಾಗೂ ಸರ್ಕಾರ ಹೊರಡಿಸಿರುವ ನಿರ್ದೇಶಾನುಸಾರ M/s MSILನಿಂದ Non-Tearable ಅಂಕಪಟ್ಟಿಗಳ ಖರೀದಿ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿ, 2018 ರಿಂದ ಕೆಲವು ಕಾಲೇಜಿನ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ನೀಡಿರುವುದಿಲ್ಲವೆಂಬ ಅಂಶವನ್ನು ಕಾಲೇಜಿನ ಪ್ರಾಂಶುಪಾಲರುಗಳು ತಿಳಿಸಿದರೆನ್ನಲಾದ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತಂದರು.

ಕುಲಪತಿಗಳು ಉತ್ತರಿಸಿ M/s MSIL ಸಂಸ್ಥೆಯವರು ಬೇರೆ ಕೆಲವು ವಿಶ್ವವಿದ್ಯಾಲಯಗಳಿಗೆ ಪ್ರತಿ ಖಾಲಿ ಅಂಕಪಟ್ಟಿಗೆ ರೂ.41/–ಗಳಂತೆ ಸರಬರಾಜು ಮಾಡುತಿದ್ದು, ಬೆಂಗಳೂರು ವಿಶ್ವದ್ಯಾಲಯಕ್ಕೆ ರೂ.43/–ಗಳ ದರವನ್ನು ನಮೂದಿಸಿದ್ದಾರೆ. ಈ ಬಗ್ಗೆ ವಿಚಾರಿಸಲಾಗಿ ಹಾಲೋಗ್ರಾಮ್ ಅಳವಡಿಸಿರುವುದರಿಂದ ಹೆಚ್ಚಿನ ದರವಿರುವುದಾಗಿ ತಿಳಿಸಿದರು. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ 10 ಲಕ್ಷ ಅಂಕಪಟ್ಟಿಗೆ ಸುಮಾರು 20 ಲಕ್ಷಗಳಷ್ಟು ಹೆಚ್ಚಿನ ದರ ಕೊಡಬೇಕಾಗುತ್ತದೆ. ಆದಕಾರಣ, ಟೆಂಡರ್ ಅಂತಿಮಗೊಳಿಸಲು ವಿಳಂಬವಾಗಿದೆ. ನಾವು ಸದರಿ ಟೆಂಡರ್‌ದಾರರೊಂದಿಗೆ Negotiate ಮಾಡಿ ಬೇರೆ ವಿಶ್ವವಿದ್ಯಾಲಯಕ್ಕಿಂತ 20 ಪೈಸೆ ಕಡಿಮೆ ಮಾಡಿಸಿದ್ದೇವೆ. ಆದರೆ, ಕೇಂದ್ರ ಖರೀದಿ ಸಮಿತಿ ಮುಂದೆ ಮಂಡಿಸಿ ಆದೇಶ ನೀಡುವ ಹೊತ್ತಿಗೆ, ಪ್ರಸ್ತುತ ಅಂಕಪಟ್ಟಿ ಖರೀದಿ ಸಂಬಂಧ ಅವ್ಯವಹಾರ ನಡೆದಿದೆ ಎಂದು ಆರೋಪಿಸಿರುವ ಬಗ್ಗೆ ಮಾನ್ಯ ರಾಜ್ಯಪಾಲರ ಕಾರ್ಯಾಲಯದಿಂದ ವರದಿ ಕೋರಿದ್ದರಿಂದ ವರದಿಯನ್ನು ಸಲ್ಲಿಸಲಾಗಿದ್ದು, ಮುಂದಿನ ನಿರ್ದೇಶನ ಬರುವವರೆಗೂ ಕಾಯುವುದಾಗಿ ತಿಳಿಸಿದರು. ಅಂಕಪಟ್ಟಿಗಳನ್ನು ನೀಡಲು ಎಲ್ಲಾ ಪ್ರಾಂಶುಪಾಲರುಗಳಿಂದ ಒತ್ತಾಯ ಬರುತ್ತಿರುವುದರಿಂದ, MSIL ನಿಂದ ಅಂಕಪಟ್ಟಿ ಖರೀದಿ ಮಾಡುವವರೆಗೆ, ಹಿಂದಿನ ಪದ್ಧತಿಯಂತೆ Tearable ಅಂಕಪಟ್ಟಿಗಳನ್ನು ನೀಡಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ವಿದ್ಯಾರ್ಥಿಗಳ ಪದವಿ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳನ್ನು ಸರ್ಕಾರದ ನಿರ್ದೇಶದನುಸಾರ ಈ–ಸಿಗ್ನೇಚರ್‌ನೊಂದಿಗೆ ಡಿಜಿಲಾಕರ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ನೇರವಾಗಿ ಅಲ್ಲಿಂದಲೇ ವಿದ್ಯಾರ್ಥಿಗಳ ಅಂಕಪಟ್ಟಿ / ಪದವಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಬಹುದಾಗಿದೆ ಎಂದು ಸಿಂಡಿಕೇಟ್ ಗಮನಕ್ಕೆ ತಂದರು.

38. ಶ್ರೀಮತಿ ವಿ ಸುಮಂಗಲ, ಅವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನ್ಯಾಯಯುತವಾಗಿ ಕ್ರಮ ತೆಗೆದುಕೊಳ್ಳಬೇಕು. ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಅಂಕಪಟ್ಟಿ ನೀಡುವಲ್ಲಿ ಸುಮಾರು 2 ತಿಂಗಳ ಕಾಲಾವಕಾಶ ಬೇಕಾದ್ದರಿಂದ, ಸಾಫ್ಟ್ ಕಾಪಿಯನ್ನು ಡಿಜಿಲಾಕರ್‌ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ

ಹಾಗೂ ಸಂಬಂಧಪಟ್ಟ ಶಾಲೆಯ ಲಾಗಿನ್ ಐಡಿಯಲ್ಲಿಯೂ ಸಹ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುವುದು ಹಾಗೂ ನಂತರ laminated ಅಂಕಪಟ್ಟಿ ನೀಡುವ ಪ್ರಕ್ರಿಯೆ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಪ್ರಸ್ತುತ ಡಿಜಿಲಾಕರ್‌ನಲ್ಲಿ ಅಂಕಪಟ್ಟಿಗಳನ್ನು ಅಪ್ಲೋಡ್ ಮಾಡಲು ಕ್ರಮತೆಗೆದುಕೊಳ್ಳಲಾಗಿದೆ ಮತ್ತು ರಾಜ್ಯಪಾಲರ ಕಾರ್ಯಾಲಯದಿಂದ ತಾವು ನೀಡಿರುವ ವರದಿಗೆ ಉತ್ತರ ಬರುವವರೆಗೂ ಈ ಬಗ್ಗೆ ಕಾಯುವುದಾಗಿ ತಿಳಿಸಿದರು.

39. ಶ್ರೀ ಪ್ರೇಮ್ ಸೋಹನ್‌ಲಾಲ್, ಶ್ರೀ ಉದಯ ಕುಮಾರ್ ಎಂ, ಡಾ. ಗೋವಿಂದರಾಜು ಹಾಗೂ ಡಾ॥ ಸುಧಾಕರ ಹೆಚ್ ಅವರುಗಳು ಮಾತನಾಡಿ, ಪ್ರೊ. ಜಯಕುಮಾರ್ ಜಿ ರೆಡ್ಡಿಯವರಿಗೆ ಯು.ಜಿ.ಸಿ. 7ನೇ ವೇತನ ಆಯೋಗದ ವೇತನ ಬಿಡುಗಡೆ ಸಂಬಂಧಿಸಿದ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿದ ಪರಾಮರ್ಶಿತ ಟಿಪ್ಪಣಿಯನ್ನು ಹಿಂದಕ್ಕೆ ಪಡೆದಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿ, ಈ ಬಗ್ಗೆ ವಿವರ ಬಯಸಿದರು ಹಾಗೂ ಸಿಂಡಿಕೇಟ್ ಮುಂದೆ ಸಂಪೂರ್ಣ ವಿವರ ಮಂಡಿಸಬೇಕೆಂದು ತಿಳಿಸಿದರು. ಕುಲಸಚಿವರು ಮಾತನಾಡಿ ನೇಮಕಾತಿ ಮಂಡಳಿಗೆ ಸಂಬಂಧಿಸಿದ ಕೆ.ಎಸ್.ಯು ಅಧಿನಿಯಮದ ಸಂಬಂಧಪಟ್ಟ ಪ್ರಕರಣದ ಅಂಶವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು.

ಕುಲಪತಿಗಳು ವಿವರ ನೀಡಿ, ಪ್ರೊ. ಜಯಕುಮಾರ್ ಜಿ ರೆಡ್ಡಿಯವರು 2007 ರಲ್ಲಿ ಪ್ರಾಧ್ಯಾಪಕರಾಗಿ ನೇಮಕಾತಿ ಮಂಡಳಿ ಶಿಫಾರಸ್ಸಿನ ಅನುಸಾರ ಐದು ಹೆಚ್ಚುವರಿ ವೇತನ ಬಡ್ತಿಯನ್ನು ನೀಡಲಾಗಿತ್ತು. ಈ ಬಗ್ಗೆ 2014ರಲ್ಲಿ ಲೆಕ್ಕಪರಿಶೋಧಕರ ಆಕ್ಷೇಪಣೆಯಂತೆ ಅವರಿಗೆ ನೀಡಿರುವ ವೇತನ ಬಡ್ತಿ ವ್ಯತ್ಯಾಸವನ್ನು ವಸೂಲಿ ಮಾಡಲು ಕ್ರಮ ವಹಿಸಿದಾಗ ಶ್ರೀಯುತರು ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಅಲ್ಲಿನಿಂದ ಅವರಿಗೆ ಮುಂದಿನ ವಾರ್ಷಿಕ ವೇತನ ಮುಂಬಡ್ತಿ ಹಾಗೂ 2016 ರಿಂದ 7ನೇ ವೇತನ ಆಯೋಗದಂತೆ ವೇತನವನ್ನು ನಿಗದಿಪಡಿಸಿರಲಿಲ್ಲ. ಈ ವಿಷಯವಾಗಿ ಐದು ಅಡ್ವಾನ್ಸ್ ಇಂಕ್ರಿಮೆಂಟ್ ಸೇರಿದಂತೆ ತಡೆ ಹಿಡಿದಿರುವ ಅವರ ವೇತನ ಮುಂಬಡ್ತಿಯನ್ನು ಮಂಜೂರು ಮಾಡಲು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿತ್ತು. ಆದರೆ ಪ್ರೊ ಜಯಕುಮಾರ್ ಜಿ ರೆಡ್ಡಿ ಅವರು ಅವರಿಗೆ ನೀಡಿರುವ ಐದು ಅಡ್ವಾನ್ಸ್ ಇಂಕ್ರಿಮೆಂಟ್ ನೀಡಿರುವ ವಿಷಯವು ಮಾನ್ಯ ನ್ಯಾಯಾಲಯದ ಮುಂದೆ ಇರುವುದರಿಂದ, ಆ ಐದು ಅಡ್ವಾನ್ಸ್ ಇಂಕ್ರಿಮೆಂಟ್ ಅನ್ನು ಹೊರತುಪಡಿಸಿ, ಉಳಿದ ಇಂಕ್ರಿಮೆಂಟ್ ಹಾಗೂ 7ನೇ ವೇತನವನ್ನು ನೀಡಲು ಪತ್ರ ನೀಡಿದ್ದರಿಂದ, ಲೆಕ್ಕ ಪರಿಶೋಧಕರ ಆಕ್ಷೇಪಣೆಗೊಳಗಾದ ಐದು ಅಡ್ವಾನ್ಸ್ ಇಂಕ್ರಿಮೆಂಟ್ ಅನ್ನು ಹೊರತುಪಡಿಸಿ, ಬಾಕಿ ವೇತನ ಲೆಕ್ಕ ಹಾಕಿ, ವೇತನ ನಿಗಧಿಪಡಿಸಲಾಗಿದೆಯೆಂದರು. ಅವರು ಮುಂದುವರೆದು ಅವರಿಗೆ ಹೆಚ್ಚುವರಿ 5 ವೇತನ ಬಡ್ತಿ ನೀಡುವುದರ ಬಗ್ಗೆ ವಿಷಯವನ್ನು ಚರ್ಚೆಗೆ ಸಿಂಡಿಕೇಟ್ ಮುಂದೆ ತರಲಾಗುವುದು ಎಂದರು.

40. ಶ್ರೀ ಗೋಪಿನಾಥ್ ಅವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಶ್ರೀಮತಿ ಪ್ರಮೀಳಾ ಅವರಿಗೆ ಅನುಕಂಪ ಆಧಾರದ ಮೇಲೆ ಗ್ರೂಪ್ 'ಸಿ' ಹುದ್ದೆಗೆ ನೇಮಕಾತಿ ಮಾಡಲು ಅನುಮೋದಿಸಿತ್ತು. ಆದೇಶ ನೀಡಲು ಸಾಧ್ಯವಾಗದಿದ್ದರೆ ಹಿಂಬರಹ ನೀಡಬಹುದಾಗಿತ್ತು. ಆದರೆ ಈ ಬಗ್ಗೆ ಯಾವುದೇ ಬೆಳವಣಿಗೆ ಆಗಿರದ ಬಗ್ಗೆ ವಿವರ ತಿಳಿಯಬಯಸಿದರು.

ಶ್ರೀ ಪ್ರೇಮ್ ಸೋಹನ್‌ಲಾಲ್ ಹಾಗೂ ಡಾ. ಗೋವಿಂದರಾಜು ಅವರು ಮಾತನಾಡಿ ನೇಮಕಾತಿ ಆದೇಶ ಕೊಡುವುದಕ್ಕೆ ಆಗದಿದ್ದರೆ ಸಕಾರಣ ನೀಡಿ ಹಿಂಬರಹ ನೀಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ನಿರ್ದೇಶನದನುಸಾರ ಅನುಕಂಪದ ಆಧಾರದ ಮೇಲೆ ಅರ್ಜಿ ಹಾಕಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ನೇಮಕಾತಿ ಆದೇಶ ಕೊಡಬೇಕಾಗುತ್ತದೆ. ಶ್ರೀ ಶಶಿಕಿರಣ್ ಹಾಗೂ ಶ್ರೀಮತಿ ಪ್ರಮೀಳಾ ಅವರು ಅರ್ಜಿ ಸಲ್ಲಿಸಿ ಎರಡು ವರ್ಷಗಳಾಯಿತು ಹಾಗೂ ಕು. ದಿವ್ಯ ಅವರು ಅರ್ಜಿ ಸಲ್ಲಿಸಿ ಎರಡು ವರ್ಷಗಳಾಗಿದೆ. ವಿಶ್ವವಿದ್ಯಾಲಯದಲ್ಲಿ ಸಂಬಂಧಪಟ್ಟ ವಿಷಯದ ಕುರಿತು ಪರಿನಿಯಮಾವಳಿಗಳು ಇಲ್ಲದಿದ್ದರೆ ಸರ್ಕಾರದ ಆದೇಶದಂತೆ KCSR ಪಾಲನೆ ಮಾಡಬೇಕಾಗುತ್ತದೆ. ಸರ್ಕಾರದ ಆದೇಶದಲ್ಲಿ ಅನುಕಂಪ ಅಧಾರದ ನೇಮಕಾತಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರು ಪದವಿ ಅಥವಾ ಅದರ ಮೇಲಟ್ಟ ವಿದ್ಯಾರ್ಹತೆ ಹೊಂದಿದ್ದರೆ ಸಹಾಯಕ ಹುದ್ದೆ, ಪದವಿ ಪೂರ್ವ ಪರೀಕ್ಷೆ ತೇರ್ಗಡೆ ಹೊಂದಿದ್ದರೆ ಕಿರಿಯ ಸಹಾಯಕ ಹುದ್ದೆ, ಎಸ್.ಎಸ್.ಎಲ್.ಸಿ ಹಾಗೂ ಕಡಿಮೆ ವಿದ್ಯಾರ್ಹತೆ ಹೊಂದಿದ್ದರೆ ಗ್ರೂಪ್ ಡಿ ಹುದ್ದೆ ನೀಡಬೇಕೆಂದು ನಿರ್ದೇಶನವಿದೆ ಹಾಗೂ ಅಂತಹ ಪ್ರಕರಣಗಳಲ್ಲಿ 3 ತಿಂಗಳೊಳಗೆ ನೇಮಕಾತಿ ನೀಡಬೇಕು. ಪರಿನಿಯಮಾವಳಿಯನ್ನು ರಚಿಸಬೇಕಾದರೆ ಅದನ್ನು ಸರ್ಕಾರದ ನೀತಿಯನುಸಾರ ರಚಿಸಬೇಕಾಗುತ್ತದೆ. ಈಗಾಗಲೇ ನೀಡಿರುವ ಅನುಕಂಪ ನೇಮಕಾತಿಗೂ ಈ ಪ್ರಕರಣಗಳಿಗೂ ಸಂಬಂಧವಿಲ್ಲ, ಈ ಪ್ರಕರಣದಲ್ಲಿ ಅನಗತ್ಯ ವಿಳಂಬವಾಗಿದೆಯೆಂದು ತಿಳಿಸಿ ವಿದ್ಯಾರ್ಹತೆಗನುಗುಣವಾಗಿ ನೇಮಕಾತಿ ಆದೇಶ ನೀಡಲು ಅನುಮೋದಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೋರಿದರು.

ಶ್ರೀಮತಿ ವಿ ಸುಮಂಗಲ ಅವರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಕಂಪ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆಯಲ್ಲಿ ಅನುಸರಿಸುವ ಮಾರ್ಗವನ್ನು ವಿವರಿಸಿದರು.

ಕುಲಪತಿಗಳು ಮಾತನಾಡಿ ಈ ಹಿಂದೆ ಅಗತ್ಯ ವಿದ್ಯಾರ್ಹತೆ ಹೊಂದಿದ್ದರೂ ಸಹ ಅನುಕಂಪ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ ನೇಮಕಾತಿಗೊಂಡಿರುವ ನೌಕರರ ಅಹವಾಲನ್ನು ಸರಿಪಡಿಸಬೇಕಾಗಿದೆ. ಅವರುಗಳ ನೇಮಕಾತಿ ದಿನಾಂಕದಿಂದ ಗ್ರೂಪ್–ಸಿ ಹುದ್ದೆಗೆ ಪರಿಗಣಿಸಬೇಕೆಂದು ತೆಗೆದುಕೊಂಡ ಸಿಂಡಿಕೇಟ್ ನಿರ್ಣಯವನ್ನು ಕುಲಸಚಿವರು ಜಾರಿಗೊಳಿಸದ ಕಾರಣ ಉಪಕುಲಸಚಿವರಿಂದ ಆದೇಶ ಹೊರಡಿಸಲು ಕ್ರಮ ತೆಗೆದುಕೊಂಡಿದ್ದೆ. ನಂತರ

ಕುಲಸಚಿವರು, ಕುಲಪತಿಗಳ ಅನುಮೋದನೆ ಇಲ್ಲದೆ ಆ ಬಗ್ಗೆ ನೇರವಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದ ಕಾರಣ, ಸದರಿ ಪ್ರಕರಣವು ಪ್ರಸ್ತುತ ಸರ್ಕಾರದ ಮುಂದಿದೆ. ಆ ಬಗ್ಗೆ ಸರ್ಕಾರದ ಅಂತಿಮ ಆದೇಶ ಬಂದ ನಂತರ ಈ ಪ್ರಕರಣಗಳನ್ನು ಪರಿಗಣಿಸಬಹುದು. ಈಗ ಅನುಕಂಪ ಆಧಾರಿತ ನೌಕರರಿಗೆ ಅರ್ಜಿ ಸಲ್ಲಿಸಿರುವ ಶ್ರೀಮತಿ ಪ್ರಮೀಳಾ ಹಾಗೂ ಇತರರಿಗೆ ಹಿಂಬರಹ ನೀಡಿದರೆ ಅನಾನುಕೂಲವಾಗುತ್ತದೆ. ಮೈಸೂರು ವಿಶ್ವವಿದ್ಯಾಲಯ ಅನುಕಂಪ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಗೆ ಮಾತ್ರ ನೇಮಕಾತಿ ಮಾಡಲು ಪರಿನಿಯಮಾವಳಿಗಳನ್ನು ರಚಿಸಿಕೊಂಡಿದೆಯೆಂದು ತಿಳಿದುಬಂದಿದೆ. ಯಾವ ಹುದ್ದೆಗೆ ನೇಮಕಾತಿ ಮಾಡಬೇಕೆಂಬ ಬಗ್ಗೆ ಸ್ಪಷ್ಟೀಕರಣ ಕೋರಿದಾಗ ಸರ್ಕಾರವು ಪರಿನಿಯಮಗಳನ್ನು ರಚಿಸಿಕೊಳ್ಳಲು ತಿಳಿಸಿದೆ. ಅನುಕಂಪ ಆಧಾರಿತ ನೇಮಕಾತಿ ಮಾಡುವ ಕುರಿತಂತೆ ನ್ಯಾಯಾಲಯದ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದಕಾರಣ, ಮುಂದಿನ ಸಿಂಡಿಕೇಟ್ ಸಭೆಯವರೆಗೂ ಕಾಯ್ದು ನಂತರ ಇವರುಗಳ ಮನವಿಯನ್ನು ಪರಿಗಣಿಸಬಹುದಾಗಿದೆಯೆಂದು ತಿಳಿಸಿದರು.

ಡಾ. ಗೋವಿಂದರಾಜು ಅವರು ಮಾತನಾಡಿ, ಅನುಕಂಪದ ಆಧಾರದ ಮೇಲೆ ಸರ್ಕಾರದ ಆದೇಶದಂತೆ, ನಿಯಮಾವಳಿಯಂತೆ ಅವರಿಗೆ ನೇಮಕಾತಿ ಆದೇಶ ನೀಡಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಈ ಮೊದಲು ಸರ್ಕಾರ ಎರಡು ಬಾರಿ ಸ್ಪಷ್ಟ ನಿರ್ದೇಶನ ನೀಡಿ ಅನುಕಂಪ ಆಧಾರದ ಮೇಲೆ ಒಮ್ಮೆ ಗ್ರೂಪ್ 'ಡಿ' ಹುದ್ದೆಗಳಿಗೆ ನೇಮಕಾತಿ ಮಾಡಿದ ನಂತರ ಗ್ರೂಪ್ 'ಸಿ' ಹುದ್ದೆಗೆ ಪುನರ್ ನೇಮಕಾತಿ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ತಿಳಿಸಿತ್ತು. ಈ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತಂದರೂ ಕೂಡ, ಸಿಂಡಿಕೇಟ್ ಹಿಂದೆ ಆಗಿರುವ ನೇಮಕಾತಿಗಳನ್ನು, ನೇಮಕಾತಿ ದಿನಾಂಕದಿಂದ ಗ್ರೂಪ್ 'ಸಿ' ಹುದ್ದೆಗೆ ಪರಿಗಣಿಸಲು ತೆಗೆದುಕೊಂಡ ನಿರ್ಣಯವು ನಿಯಮಗಳಿಗೆ ವಿರುದ್ಧವಾದ್ದರಿಂದ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದೆ. ಕೆ.ಎಸ್.ಯು. ಅಧಿನಿಯಮ 2000 ದ ಪ್ರಕರಣ 11 ರಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳು ಯಾರೆಂದು ಸ್ಪಷ್ಟಪಡಿಸಲಾಗಿದೆ. ಅದರನ್ವಯ ಉಪಕುಲಸಚಿವರು ವಿಶ್ವವಿದ್ಯಾಲಯದ ಅಧಿಕಾರಿಯಲ್ಲ, ವಿಶ್ವವಿದ್ಯಾಲಯದ ಸಿಬ್ಬಂದಿಯಾಗಿದ್ದು, ಅವರಿಗೆ ವಿಶ್ವವಿದ್ಯಾಲಯದ ಆದೇಶಗಳನ್ನು ಸಹಿ ಮಾಡುವ ಅಧಿಕಾರವನ್ನು Delegation of Powers ಅಡಿಯಲ್ಲಿ ನೀಡಲಾಗಿರುವುದಿಲ್ಲ. ಅವರಿಂದ ಆದೇಶ ಹೊರಡಿಸಿರುವುದು ತಪ್ಪು ಎಂದು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ಚರ್ಚೆ ನಡೆದು, ವಿಷಯ ಸಂಖ್ಯೆ:4 ಮತ್ತು 5ರಲ್ಲಿ ನಿರ್ಣಯ ತೆಗೆದುಕೊಳ್ಳಲಾಯಿತು.

41. ಕುಲಪತಿಗಳು ಮಾತನಾಡಿ ವಾರ್ಷಿಕ ಘಟಿಕೋತ್ಸವ ಜರುಗಿಸಬೇಕಾದ್ದರಿಂದ ಪದಕ/ರ್‍ಯಾಂಕ್ ವಿಜೇತರಿಗೆ ಚಿನ್ನದ ಪದಕ ಪ್ರದಾನ ಮಾಡಬೇಕಾದ ಕಾರಣ ಚಿನ್ನದ ಪದಕಗಳ ಖರೀದಿ

ಸಂಬಂಧ ಅತಿ ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರಿಂದ ಚಿನ್ನದ ಪದಕ ಖರೀದಿ ಮಾಡಲು ಕೇಂದ್ರ ಖರೀದಿ ಸಮಿತಿ ಈಗಾಗಲೇ ಅನುಮೋದಿಸಿರುವಂತೆ ಕ್ರಮ ತೆಗೆದುಕೊಳ್ಳಲು ಅನುಮತಿ ಕೋರಿದರು ಹಾಗೂ ಸಮಯ ಸಂಜೆ 6 ಗಂಟೆಯಾಗಿರುವುದರಿಂದ ಸಭೆಯನ್ನು ಮುಂದೂಡಬಹುದಾಗಿದೆಯೆಂದು ತಿಳಿಸಿ ಮುಂದೂಡಿದ ಸಿಂಡಿಕೇಟ್ ಸಭೆಯನ್ನು ಮುಂದಿನ ವಾರ ಕರೆಯಲಾಗುವುದೆಂದರು.

ಚರ್ಚೆಯ ನಂತರ 56ನೇ ವಾರ್ಷಿಕ ಘಟಿಕೋತ್ಸವಕ್ಕೆ ಚಿನ್ನದ ಪದಕಗಳ ಖರೀದಿ ಸಂಬಂದ ದಿನಾಂಕ 08.11.2021 ರಂದು ನಡೆದ ಕೇಂದ್ರ ಖರೀದಿ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು.

ಕುಲಪತಿಗಳು ಮಾತನಾಡಿ, ಈಗಾಗಲೇ ಅನುಸರಣಾ ವರದಿಯ ಮೇಲೆ ಸುಮಾರು ಆರು ಗಂಟೆಗಳ ಕಾಲ ಚರ್ಚೆ ನಡೆದಿದ್ದು, ಯಾವುದೇ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಈಗಾಗಲೆ ಸಂಜೆ 6.00 ಗಂಟೆಯಾಗಿರುವುದರಿಂದ ಸಭೆಯನ್ನು ಮುಂದೂಡುವುದಾಗಿ ತಿಳಿಸಿದರು.

ಮೇಲ್ಕಂಡ ಚರ್ಚೆಯೊಂದಿಗೆ ಸಿಂಡಿಕೇಟ್ ಸಭೆಯನ್ನು ಮುಂದೂಡಲಾಯಿತು.

**ದಿನಾಂಕ 17-11-2021 ರಂದು ಜರುಗಿದ ಮುಂದೂಡಲ್ಪಟ್ಟ 161ನೇ ಸಿಂಡಿಕೇಟ್ ಸಭೆಯ ನಡವಳಿಗಳು**

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಸಿಂಡಿಕೇಟ್ ಸದಸ್ಯರಾದ ಡಾ॥ ಸುಧಾಕರ್. ಹೆಚ್ ಅವರು ಮಾತನಾಡಿ ಸಿಂಡಿಕೇಟ್ ಸಭೆಯ ಸಮಯವು ಅತ್ಯಮೂಲ್ಯವಾದುದರಿಂದ, ಇನ್ನು ಮುಂದೆ ಯಾವುದೇ ವಿದ್ಯಾರ್ಥಿಗಳು ಸಿಂಡಿಕೇಟ್ ಸಭೆಯ ಮಧ್ಯದಲ್ಲಿ ಮನವಿ ಸಲ್ಲಿಸಲು ಅವಕಾಶ ನೀಡಬಾರದೆಂದು ತಿಳಿಸಿದರು. ಇದರಿಂದಾಗಿ ನಿಗದಿತ ಕಾರ್ಯಸೂಚಿಯನ್ನು ಪೂರ್ಣಗೊಳಿಸಲು ಅನುಕೂಲವಾಗುವುದು ಎಂದರು.

ಕುಲಪತಿಗಳು ಮಾತನಾಡಿ, ಈಗಾಗಲೇ ಒಂದು ದಿನ ಅನುಸರಣಾ ವರದಿಯ ಮೇಲೆ ಚರ್ಚೆ ನಡೆದಿರುವ ಕಾರಣ ಇಂದು ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದು ಸದಸ್ಯರಲ್ಲಿ ಮನವಿ ಮಾಡಿದರು.

ಡಾ. ಗೋವಿಂದರಾಜು ಮತ್ತು ಶ್ರೀ ಪ್ರೇಮ್ ಸೋಹನ್‌ಲಾಲ್ ಅವರು ಮಾತನಾಡಿ ಅನುಸರಣಾ ವರದಿಯ ಮೇಲೆ ಚರ್ಚೆ ಇನ್ನೂ ಅಪೂರ್ಣವಾಗಿರುವುದರಿಂದ ಸದರಿ ವಿಷಯವನ್ನು ಪೂರ್ಣಗೊಳಿಸಿದ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ತಿಳಿಸಿದರು.

1. ಶ್ರೀ ಉದಯ ಕುಮಾರ್ ಎಂ. ಅವರು ಮಾತನಾಡಿ ದಿನಾಂಕ: 14-09-2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಶರತ್ ಅನಂತಮೂರ್ತಿ ಅವರ ಲೀನ್ ಅವಧಿಯನ್ನು ವಿಸ್ತರಿಸಿರುವ ಕುರಿತಂತೆ ಅವರು ನೀಡಿದ್ದ ಅಸಮ್ಮತಿ ಪತ್ರವನ್ನು ನಡಾವಳಿಯೊಂದಿಗೆ ಲಗತ್ತಿಸಿಲ್ಲವೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ ಸಭೆ ನಡೆದು ಎರಡು ದಿನಗಳ ಒಳಗಾಗಿ ಸದಸ್ಯರುಗಳಿಂದ ಬಂದಂತಹ ಅಸಮ್ಮತಿ ಪತ್ರಗಳನ್ನು ಮಾತ್ರ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ಸೇರಿಸಲಾಗುತ್ತದೆ ಎಂದು ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಹಾಗೂ ಡಾ|| ಗೋವಿಂದರಾಜು ಅವರು ಮಾತನಾಡಿ, ದಿನಾಂಕ: 09-11-2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅವರುಗಳು ಕೋರಿದ ದಾಖಲೆಗಳನ್ನು ಇನ್ನೂ ಒದಗಿಸಿರುವುದಿಲ್ಲವೆಂದು ತಿಳಿಸಿದರು. ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸಭೆಯ ವಿಡಿಯೋಗ್ರಫಿಯ ಬಗ್ಗೆ ಮಾನ್ಯ ರಾಜ್ಯಪಾಲರಿಗೆ ಬರೆದಿರುವ ಪತ್ರ, ವಿಶ್ವವಿದ್ಯಾಲಯದಿಂದ ಇಂಟರ್ ಯೂನಿವರ್ಸಿಟಿ ಸೆಂಟರ್ ಫಾರ್ ಯೋಗಿಕ್ ಸೈನ್ಸ್‌ಗೆ ಜಮೀನು ಮಂಜೂರು ಮಾಡುವ ಕುರಿತು ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿಗೆ ಸಲ್ಲಿಸಿರುವ Statement of Objection ಪ್ರತಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಕುರಿತು ವಿಶ್ವವಿದ್ಯಾಲಯ ರಚಿಸಿರುವ ಸಮಿತಿಯ ಅಧಿಸೂಚನೆಯ ಪ್ರತಿ, ಶ್ರೀಮತಿ ಜಯಮ್ಮ, ಶ್ರೀ ನಿಜಲಿಂಗಪ್ಪ ಸೇರಿದಂತೆ ಮೂವರು ದಿನಗೂಲಿ ನೌಕರರ ಖಾಯಮಾತಿ ಕುರಿತು ಹೊರಡಿಸಲಾದ ಆದೇಶ ಮುಂತಾದ ದಾಖಲೆಗಳ ಪ್ರತಿಗಳನ್ನು ಸದಸ್ಯರುಗಳಿಗೆ ಒದಗಿಸಿದರು.

2. ಡಾ. ಗೋವಿಂದರಾಜು ಅವರು ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಕುರಿತು ವಿಶ್ವವಿದ್ಯಾಲಯದಿಂದ ಹೊರಗಿನ ವಿಷಯ ತಜ್ಞರನ್ನೊಳಗೊಂಡಂತೆ ರಚಿಸಿರುವ ಸಮಿತಿಯ ಅಧಿಸೂಚನೆಯ ಪ್ರತಿಯನ್ನು ಕೋರಿದರು. ಕುಲಪತಿಗಳು ಸದರಿ ಸಮಿತಿಯನ್ನು ಇನ್ನೂ ರಚಿಸಿರುವುದಿಲ್ಲ, ಸಧ್ಯದಲ್ಲೇ ರಚಿಸುವುದಾಗಿ ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಅಕಾಡೆಮಿಕ್ ಡೆವೆಲಪ್‌ಮೆಂಟ್ ಸಮಿತಿ ಸದಸ್ಯರನ್ನು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸುವ ಸಂಬಂಧದ ಸಮಿತಿಗೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ ಸದರಿ ಸಮಿತಿಯನ್ನು ಸರ್ಕಾರ ಹೊರಡಿಸಿರುವ ಆದೇಶಾನುಸಾರ ರಚಿಸಲಾಗುತ್ತದೆ ಎಂದು ತಿಳಿಸಿದರು.

3. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಕಳೆದ ಎರಡು ವರ್ಷಗಳಲ್ಲಿ ತಾವು ಹಲವಾರು ಪತ್ರಗಳನ್ನು ಬರೆದಿದ್ದರೂ ಸಹ, ವಿಶ್ವವಿದ್ಯಾಲಯದಿಂದ ಯಾವುದೇ ಉತ್ತರ ನೀಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಕುಲಪತಿಗಳು ಉತ್ತರಿಸಿ, ಒಂದು ವಾರದೊಳಗಾಗಿ ತಮಗೆ ಉತ್ತರ ಕಳುಹಿಸಲು ಕ್ರಮ

ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಅವರು ಮುಂದುವರೆದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸುವ ಬಗ್ಗೆ ರಚಿಸಿರುವ ಸಮಿತಿಯಿಂದ ಯಾವುದೇ ಮಾಹಿತಿ ಸಿಗುವುದಿಲ್ಲ. ಸದರಿ ಸಮಿತಿಯನ್ನು ಸರ್ಕಾರದ ಮಾರ್ಗದರ್ಶಿಯಂತೆ ರಚಿಸಿರುವುದಿಲ್ಲವೆಂದು ತಿಳಿಸಿದರು.

4. ಶ್ರೀ ಆರ್. ಮಂಜುನಾಥ, ನಿರ್ದೇಶಕರು ತಾಂತ್ರಿಕ ಶಿಕ್ಷಣ ಅವರು ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಮಾರ್ಗಸೂಚಿಗಳನ್ನು ಕಳುಹಿಸಿಕೊಟ್ಟಿದ್ದು, ಸದರಿ ಮಾರ್ಗಸೂಚಿಯನುಸಾರ ಸಮಿತಿ ರಚನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಕುಲಪತಿಗಳು ಉತ್ತರಿಸಿ, ತಾವು ಈಗಾಗಲೇ ತಿಳಿಸಿರುವಂತೆ, ಟಾಸ್ಕ್‌ಫೋರ್ಸ್ ಅನ್ನು ಸದ್ಯದಲ್ಲೇ ಸರ್ಕಾರದ ಮಾರ್ಗಸೂಚಿಯನುಸಾರ ರಚಿಸಲಾಗುತ್ತದೆ ಎಂದು ತಿಳಿಸಿದರು.

5. ಶ್ರೀ ಗೋಪಿನಾಥ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ ರಚಿಸುವ ಎಲ್ಲಾ ಸಮಿತಿಗಳಿಗೆ, ಕುಲಪತಿಗಳೇ ಅಧ್ಯಕ್ಷರಾಗುತ್ತಾರೆ. ಅವರಿಗೆ ಇದರಲ್ಲಿ ವೈಯಕ್ತಿಕ ಆಸಕ್ತಿ ಇದೆ ಎಂದು ತಿಳಿಸಿದರು. ಕುಲಪತಿಗಳು ಮಾತನಾಡಿ, ಸಭಾಧ್ಯಕ್ಷರ ಸ್ಥಾನಕ್ಕೆ ಚ್ಯುತಿ ಬರದಂತೆ ಸದಸ್ಯರುಗಳು ಮಾತನಾಡಬೇಕೆಂದು ತಿಳಿಸಿ, ಸದಸ್ಯರುಗಳು ಬಯಸುವ ಎಲ್ಲಾ ಮಾಹಿತಿಯನ್ನು ನೀಡಲಾಗುವುದೆಂದರು. ಸಭೆ ನಡೆಸುವುದು ಇಷ್ಟವಿಲ್ಲವೆಂದರೆ ನಿಗಧಿತ ಕಾರ್ಯಸೂಚಿಯನ್ನು ಪರಿಚಲನ ಮೂಲಕ ಸದಸ್ಯರ ಅನುಮೋದನೆಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು (Cam1, Video DVD, 31.22).

6. ಡಾ. ಪಿ. ದೀಪಾ ಶಣೈ ಅವರು ಮಾತನಾಡಿ, ಸಭೆಯ ಸಮಯವನ್ನು ವ್ಯರ್ಥ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ, ಆದ್ದರಿಂದ ವಿಷಯಗಳ ಬಗ್ಗೆ ಚರ್ಚಿಸಬಹುದಾಗಿದೆ ಎಂದು ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಹಾಗೂ ಡಾ॥ ಗೋವಿಂದರಾಜು ಅವರುಗಳು ಮಾತನಾಡಿ, ಸದಸ್ಯರು ಕೋರುವ ದಾಖಲೆಗಳನ್ನು ನೀಡಿದರೆ, ಇಷ್ಟೊಂದು ಚರ್ಚೆ ನಡೆಯುತ್ತಿರಲಿಲ್ಲ. ಆದ್ದರಿಂದ ಹಿಂದಿನ ಸಿಂಡಿಕೇಟ್ ಸಭೆಯ ನಡಾವಳಿಗಳ ಬಗ್ಗೆ ತೆಗೆದುಕೊಂಡಿರುವ ಅನುಸರಣಾ ವರದಿಯ ಬಗ್ಗೆ ಸದಸ್ಯರು ಕೋರುವ ದಾಖಲೆ ಹಾಗೂ ಮಾಹಿತಿಯನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.

7. ಶ್ರೀ ಆರ್. ಮಂಜುನಾಥ, ನಿರ್ದೇಶಕರು ತಾಂತ್ರಿಕ ಶಿಕ್ಷಣ ಅವರು ಮಾತನಾಡಿ, ಸದಸ್ಯರು ಕಾರ್ಯಸೂಚಿಯಲ್ಲಿರುವಂತೆ ವಿಷಯಗಳ ಬಗ್ಗೆ ತೆಗೆದುಕೊಳ್ಳಬಹುದಾದ ಕ್ರಮ, ಸದಸ್ಯರು ಸೂಚಿಸುವ ಸಲಹೆಗಳಿಗೆ ಸಭಾಧ್ಯಕ್ಷರು ವಿವರಣೆ ನೀಡಿ ಮುಂದಿನ ವಿಷಯಕ್ಕೆ ಹೋಗಬಹುದು ಎಂದು ತಿಳಿಸಿದರು. ದಾಖಲೆ ಪತ್ರಗಳನ್ನು ಸಭೆಯ ನಂತರ ನೀಡಬಹುದಾಗಿದೆ ಎಂದು ತಿಳಿಸಿದರು.

8. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವಿದ್ಯಾರ್ಥಿಗಳ ಸಮಸ್ಯೆಗೆ ಸಂಬಂಧಿಸಿರುವ ದಾಖಲೆಗಳನ್ನು ತಾವು ಕೋರುತ್ತಿರುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಕೆಲವೊಂದು ಅತೀ ಮುಖ್ಯ ವಿಷಯಗಳನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ. ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು 30ನೇ ಸೆಪ್ಟಂಬರ್ ಒಳಗೆ ಸರ್ಕಾರಕ್ಕೆ ಕಳುಹಿಸಬೇಕಾಗಿತ್ತು, ಅದು ಸಾಧ್ಯವಾಗಿರುವುದಿಲ್ಲ. ಆದ್ಯತೆ ಮೇರೆಗೆ ವಿಷಯವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಡಾ. ಗೋವಿಂದರಾಜು ಅವರು ಮಾತನಾಡಿ, ಅನುಸರಣಾ ವರದಿ ಮುಗಿದ ನಂತರವೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿ, ಶ್ರೀ ಆಲಂಪಲ್ಲಿ ವೆಂಕಟರಾಮ್ ಚೇರ್‌ಗೆ ಸಂಬಂಧಿಸಿದಂತೆ ಡಾ॥ ವೈ ನಾರಾಯಣಚೆಟ್ಟಿ ಅವರಿಂದ ವಸೂಲಾತಿ ಮಾಡಲಾದ ಅಂಗೀಕಾರವಲ್ಲದ ಪ್ರಭಾರ ಭತ್ಯೆಯ ವಿವರಗಳ ಬಗ್ಗೆ ಹಾಗೂ ಗಣಿತಶಾಸ್ತ್ರ ವಿಭಾಗಕ್ಕೆ ನ್ಯಾಷನಲ್ ಸೈನ್ಸ್ ಡೇ ಆಚರಣೆ ಸಂಬಂಧಿಸಿದಂತೆ ಹೆಚ್ಚುವರಿ ಖರ್ಚಿನ ಕುರಿತು ಮಾಹಿತಿ ಬಯಸಿದರು. ಕುಲಸಚಿವರು ಉತ್ತರಿಸಿ, ಸಿಂಡಿಕೇಟ್ ನಿರ್ಣಯದಂತೆ ವಿತ್ತಾಧಿಕಾರಿಗಳಿಂದ ಅಭಿಪ್ರಾಯ ಪಡೆಯಲಾಗಿದ್ದು, ಡಾ॥ ವೈ ನಾರಾಯಣಚೆಟ್ಟಿ ಅವರಿಗೆ ನೀಡಿದ್ದ ಅಂಗೀಕಾರವಲ್ಲದ ಪ್ರಭಾರ ಭತ್ಯೆಯನ್ನು ವಸೂಲು ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಗಣಿತಶಾಸ್ತ್ರ ವಿಭಾಗದ ಅಧ್ಯಕ್ಷರಿಗೆ ಯಾವುದೇ ಹೆಚ್ಚುವರಿ ಭತ್ಯೆ ನೀಡಲು ಸಾಧ್ಯವಿಲ್ಲವೆಂದು ಹಿಂಬರಹ ನೀಡಲಾಗಿದೆ ಎಂದು ತಿಳಿಸಿದರು.

9. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ವಿರುದ್ಧ ದಾಖಲಾಗಿರುವ ವ್ಯಾಜ್ಯಗಳು ಹಾಗೂ ಅವುಗಳ ಪ್ರಗತಿ ಬಗ್ಗೆ ವಿವರಗಳನ್ನು ಇಲ್ಲಿಯವರೆಗೂ ಸದಸ್ಯರುಗಳಿಗೆ ನೀಡಿರುವುದಿಲ್ಲವೆಂದು ತಿಳಿಸಿದರು. ಕುಲಪತಿಗಳು ಮಾತನಾಡಿ, ಕಾನೂನು ಸಲಹೆಗಾರರ ನೇಮಕವಾದ ಮೇಲೆ ಸದರಿ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ಮಹಿಳಾ ಅಧ್ಯಯನ ವಿಭಾಗದಲ್ಲಿ ನಡೆದಿರುವ ಶಿಕ್ಷಕರ ನೇಮಕಾತಿಯ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ, ವಿಶ್ವವಿದ್ಯಾಲಯದ ವಿರುದ್ಧವಾಗಿ ನಿರ್ಣಯ ಆಗಿದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ವಿವರ ನೀಡಬೇಕೆಂದು ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಈ ಬಗ್ಗೆ ಮಾಹಿತಿ ಪಡೆದು ಸಿಂಡಿಕೇಟ್‌ಗೆ ಮಂಡಿಸಿ ಎಂದು ತಿಳಿಸಿದರು. ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ವಕೀಲರ ಮಾಹಿತಿ ಪ್ರಕಾರ ಸದರಿ ಕೇಸ್ ಮುಂದೂಡಲ್ಪಟ್ಟಿರುವುದಾಗಿ ತಿಳಿದುಬಂದಿದೆ ಎಂದರು. ಕುಲಪತಿಗಳು ಉತ್ತರಿಸಿ ಹಾಗೇನಾದರೂ ವಿಶ್ವವಿದ್ಯಾಲಯದ ವಿರುದ್ಧವಾಗಿ ತೀರ್ಪು ಬಂದಿರುವುದೇ ಆದರೆ ಅದರ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಿದರು.

10. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಕೀಲರ ಪಟ್ಟಿ ಪರಿಷ್ಕರಿಸುವ ಸಂಬಂಧ ರಚಿಸಲ್ಪಟ್ಟಿರುವ ಸಮಿತಿಯ ಸಭೆ ನಡೆದಿರುವುದಿಲ್ಲ. ಕಾನೂನು ಕೋಶ ಸರಿಯಾದ ರೀತಿ ಕೆಲಸ ನಿರ್ವಹಿಸುತ್ತಿಲ್ಲ. ಕಾನೂನು ಕೋಶಕ್ಕೆ ಸರಿಯಾದ ಕಛೇರಿ ಸ್ಥಳಾವಕಾಶ ಇಲ್ಲದ ಕಾರಣ ಸದರಿ ಕಛೇರಿಯನ್ನು ಜ್ಞಾನಭಾರತಿಗೆ

ಸ್ಥಳಾಂತರಿಸಲು ಕೋರಿದರು. ಕುಲಪತಿಗಳು ಉತ್ತರಿಸಿ, ಕಾನೂನು ಸಲಹೆಗಾರರ ನೇಮಕಾತಿ ಆದರೆ, ಸದರಿ ಕಛೇರಿಯ ಕೆಲಸಗಳು ಸುಸೂತ್ರವಾಗಿ ನಡೆಯುತ್ತದೆ. ಕಾನೂನು ಕೋಶವನ್ನು ಬ್ರೈಲ್ ಸೆಂಟರ್‌ನ ಮೊದಲ ಮಹಡಿಗೆ ಅಥವಾ ಯು.ವಿ.ಸಿ.ಇ. ಆವರಣಕ್ಕೆ ಸ್ಥಳಾಂತರಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

11. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಕ್ಯಾಂಪಸ್ ಡೆವೆಲಪ್‌ಮೆಂಟ್ ಸಮಿತಿ ಸಲ್ಲಿಸಿದ್ದ ವರದಿಯನ್ನು ಹಿಂದಿನ ಸಿಂಡಿಕೇಟ್ ಸಭೆ ಅನುಮೋದಿಸಿದೆ. ಆದಕಾರಣ ಸದರಿ ವರದಿಯನುಸಾರ, ವಿಶ್ವವಿದ್ಯಾಲಯದ ಆವರಣದಲ್ಲಿರುವ ಅನಧಿಕೃತ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬಯಸಿ, ಸದರಿ ಅಂಗಡಿಗಳಲ್ಲಿ ಕಾನೂನು ಬಾಹಿರ ಚಟುವಟಿಕೆ ನಡೆಸಲಾಗುತ್ತಿದೆ. ಶ್ರೀ ಗೋಪಿನಾಥ್ ಅವರು ಮಾತನಾಡಿ, ಕ್ಯಾಂಪಸ್ ಡೆವೆಲಪ್‌ಮೆಂಟ್ ಸಮಿತಿ ಶಿಫಾರಸ್ಸಿನಂತೆ ಜ್ಞಾನಭಾರತಿ ಆವರಣದಲ್ಲಿ ಕಸ ಹಾಕದಂತೆ ಸೂಚನಾ ಫಲಕಗಳನ್ನು ಅಳವಡಿಸುವ ಕುರಿತು ಮಾಹಿತಿ ಬಯಸಿದರು.

ಕುಲಪತಿಗಳು ಉತ್ತರಿಸಿ, ಸೂಚನಾ ಫಲಕ ಅಳವಡಿಸಲು ಈಗಾಗಲೆ ಹಣ ಮಂಜೂರಾತಿ ಮಾಡಲಾಗಿದೆ. ಅದರ ಬಗ್ಗೆ ವಿಶ್ವವಿದ್ಯಾಲಯದ ಅಭಿಯಂತರರು ಕ್ರಮ ಕೈಗೊಳ್ಳುತ್ತಿದ್ದಾರೆ ಮತ್ತು ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಅಭಿಯಂತರರಿಗೆ ಸೂಚಿಸಲಾಗುವುದೆಂದರು. ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಿಂದ ಅಧಿಕೃತವಾಗಿ ಅಂಗಡಿ ತೆರೆಯಲು ಅನುಮತಿ ನೀಡಿದ್ದರೆ, ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅನಧಿಕೃತವಾಗಿ ತೆಗೆದಿದ್ದರೆ ಕೂಡಲೇ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ ಎಂದು ತಿಳಿಸಿದರು.

12. ಶ್ರೀ ವಿಧೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ, ವಿಶ್ವವಿದ್ಯಾಲಯದ ವಸತಿ ಗೃಹಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ತೆರವುಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ, ಈ ಬಗ್ಗೆ ಈಗಾಗಲೇ ಅಭಿಯಂತರ ವಿಭಾಗ ಹಾಗೂ ಸಂಪತ್ತಿ ವಿಭಾಗ ಒಟ್ಟಾಗಿ ಸೇರಿ ಅನಧಿಕೃತ ವಾಸಿಸುತ್ತಿರುವವರನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದೇನೆ ಎಂದು ತಿಳಿಸಿದರು.

13. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಈ ಬಗ್ಗೆ ತೆಗೆದುಕೊಂಡ ನಿರ್ಣಯದ ಬಗ್ಗೆ ಅನುಸರಣಾ ವರದಿ ನೀಡಬೇಕೆಂದು ತಿಳಿಸಿದರು.

14. ಶ್ರೀ ವಿಧೇಯ ಬೆಳಗೋಡೆ ಶ್ರೀಕಂಠ ಹಾಗೂ ಡಾ॥ ಸುಧಾಕರ ಹೆಚ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣದೊಳಗೆ ಬಹಳಷ್ಟು ಖಾಸಗಿ ವಾಹನಗಳನ್ನು ವಿಭಾಗಗಳ ಕಛೇರಿ ಮುಂಬಾಗದಲ್ಲಿ ನಿಲ್ಲಿಸುವುದರಿಂದ ವಿದ್ಯಾರ್ಥಿಗಳು ಮತ್ತು ಶಿಕ್ಷಕರುಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ವಿಭಾಗಗಳ ಮುಂಭಾಗದಲ್ಲಿ ಸಾಧ್ಯವಾದ ಕಡೆ ತಂತಿ ಬೇಲಿ ಅಳವಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಜ್ಞಾನಭಾರತಿ ಆವರಣಕ್ಕೆ ಸಾರ್ವಜನಿಕರಿಗೆ ಮುಕ್ತವಾಗಿ ಪ್ರವೇಶವಿರುವುದರಿಂದ ಅವರುಗಳನ್ನು ಹಾಗೂ ಖಾಸಗಿ ವಾಹನಗಳ ಓಡಾಟ ನಿರ್ಬಂಧಿಸಲು ಸಾಧ್ಯವಾಗುವುದಿಲ್ಲ. ಆದರೆ, ಎಲ್ಲಿ ಸಾಧ್ಯವೋ ಅಲ್ಲಿ ಫೆನ್ಸಿಂಗ್ ಹಾಗೂ ಸೂಚನಾ ಫಲಕಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ಎಲ್ಲಾ ವಿಭಾಗಗಳಿಗೆ ತಂತಿ ಬೇಲಿ ಅಳವಡಿಸುವುದು ಕಷ್ಟ ಸಾಧ್ಯ, ವಿಶ್ವವಿದ್ಯಾಲಯದ ಆವರಣದೊಳಗೆ ಹಾಯ್ದು ಹೋಗುವ ರಸ್ತೆಯ ಎರಡೂ ಬದಿಯಲ್ಲಿ ತಡೆಗೋಡೆ ನಿರ್ಮಿಸಬೇಕೆಂದು ಸಂಬಂಧಪಟ್ಟ ಶಾಸಕರಿಂದ ಸಹಾಯ ಕೋರಬಹುದಾಗಿದೆ ಎಂದರು.

ಡಾ. ಗೋವಿಂದರಾಜು ಅವರು ಮಾತನಾಡಿ, ರಸ್ತೆ ಬದಿ ಫೆನ್ಸಿಂಗ್ ಹಾಗೂ ಫ್ಲೈ-ಓವರ್ ನಿರ್ಮಿಸುವ ಬಗ್ಗೆ ಯೋಜಿಸಬಹುದಾಗಿದೆ. ಕುಲಪತಿಗಳು ಮಾತನಾಡಿ, ಫ್ಲೈ-ಓವರ್ ನಿರ್ಮಿಸುವುದು ತುಂಬಾ ದುಬಾರಿ, ರಸ್ತೆ ಬದಿ ಫೆನ್ಸಿಂಗ್‌ಗೆ ಶಾಸಕರ ಸಹಾಯ ಕೋರಬಹುದಾಗಿದೆ ಎಂದರು.

15. ಡಾ. ಗೋವಿಂದರಾಜು ಅವರು ಮಾತನಾಡಿ, ISEC ಸಂಸ್ಥೆಯೊಂದಿಗೆ Social Science & Research Scholarship ನೀಡುವ ಬಗ್ಗೆ ವಿಶ್ವವಿದ್ಯಾಲಯ ಮತ್ತು ISEC ನೊಂದಿಗೆ ವಿಶ್ವವಿದ್ಯಾಲಯದೊಂದಿಗೆ ಎಂ.ಓ.ಯು. ಪ್ರತಿ ನೀಡಬೇಕು ಮತ್ತು ವಿಶ್ವವಿದ್ಯಾಲಯದ ಎಷ್ಟು ವಿದ್ಯಾರ್ಥಿಗಳಿಗೆ ಪ್ರಯೋಜನ ನೀಡಿದ್ದಾರೆ ಎಂಬ ಬಗ್ಗೆ ಮಾಹಿತಿ ಒದಗಿಸಬೇಕೆಂದು ಕೋರಿದರು. ಅವರು ಮುಂದುವರೆದು ಮಾತನಾಡಿ, ಕಳೆದ ಸಿಂಡಿಕೇಟ್ ಸಭೆಯಲ್ಲಿ 59ನೇ ಕಾಮಗಾರಿ ಸಮಿತಿಯ ಸಭೆಯ ನಡಾವಳಿಗಳ ಅನುಮೋದನೆ ತಾವು ಅಸಮ್ಮತಿ ಪತ್ರ ನೀಡಿದ್ದರೂ ಸಹ ಪತ್ರವನ್ನು ನಡಾವಳಿಯೊಂದಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಉತ್ತರಿಸಿ ISEC ಸಂಸ್ಥೆಯೊಂದಿಗೆ ಆಗಿರುವ ಎಂ.ಓ.ಯು. ಪ್ರತಿಯನ್ನು ಒದಗಿಸಲಾಗುವುದು. ಅವರು ನೀಡಿರುವ ಅಸಮ್ಮತಿ ಪತ್ರವನ್ನು ನಡಾವಳಿಯ ಜೊತೆಗೆ ಸದಸ್ಯರೆಲ್ಲರಿಗೂ ಕಳುಹಿಸಿಕೊಡಲಾಗಿದೆ ಆದರೆ, ವೆಬ್‌ಸೈಟ್‌ನಲ್ಲಿ ಅದು ಲಭ್ಯವಿಲ್ಲದಿದ್ದರೆ ಮತ್ತೊಮ್ಮೆ ಸರಿಪಡಿಸಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಅವರು ಸಹ 59ನೇ ಕಾಮಗಾರಿ ಸಮಿತಿಯ ನಡಾವಳಿಯ ವಿಷಯ ಸಂಖ್ಯೆ 1, 2 ಮತ್ತು 19 ರ ಕಾಮಗಾರಿಗಳ ಅನುಮೋದನೆಗೆ ಅಸಮ್ಮತಿ ಇದೆ ಎಂದು ತಿಳಿಸಿದ್ದೆನು, ಆದಕಾರಣ ಈ ವಿಷಯವನ್ನು ದಾಖಲಿಸಬೇಕು ಎಂದು ಕೋರಿದರು. ಡಾ. ಸುಧಾಕರ ಹೆಚ್, ಪ್ರೊ. ಟಿ.ವಿ. ರಾಜು, ಶ್ರೀ ವಿಧೇಯ ಬೆಳಗೋಡೆ, ಹಾಗೂ ಶ್ರೀ ಗೋಪಿನಾಥ್ ಅವರುಗಳೂ 59ನೇ ಕಾಮಗಾರಿ ಸಮಿತಿಯ ಸಭೆಯ ಸಿಂಡಿಕೇಟ್ ನಡಾವಳಿಗಳ ಅನುಸರಣಾ ವರದಿಯನ್ನು ಅನುಮೋದಿಸುವ ಕುರಿತು ತಮ್ಮ ಅಸಮ್ಮತಿ ಇದೆ ಎಂದು ತಿಳಿಸಿದರು. ಕುಲಪತಿಗಳು ಮಾತನಾಡಿ ಮೇಲ್ಕಂಡ ಸಮಿತಿಯ

ನಡಾವಳಿಯ ಅನುಮೋದನೆಗೆ ಇಬ್ಬರು ಸದಸ್ಯರು ಹಾಗೂ ಸದರಿ ನಡಾವಳಿಯ ಅನುಸರಣಾ ವರದಿಯ ಬಗ್ಗೆ ಐದು ಜನ ಸದಸ್ಯರ ಅಸಮ್ಮತಿ ಇದೆ ಎಂದು ದಾಖಲಿಸಲಾಗುವುದು ಎಂದು ತಿಳಿಸಿದರು.

16. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ದೈಹಿಕ ಶಿಕ್ಷಣ ನಿರ್ದೇಶನಾಲಯದ ಹಾಸ್ಟೆಲ್ ಕಟ್ಟಡ ರಿಪೇರಿ ಕಾಮಗಾರಿ ಪೂರ್ಣಗೊಂಡಿಲ್ಲ. ಕಳೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಿದಂತಹ ಅಂದಾಜು ಪಟ್ಟಿ ಎಸ್.ಆರ್. ದರಕ್ಕಿಂತ 34% ಹೆಚ್ಚಿಗೆ ಇದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಹಾಸ್ಟೆಲ್ ಕಟ್ಟಡದ ಶೌಚಾಲಯ ಬ್ಲಾಕ್‌ನ ಕಾಮಗಾರಿ ಸಂಬಂಧಿಸಿದಂತೆ ಕಾಮಗಾರಿ ಅಂದಾಜುಪಟ್ಟಿ 34% ಹೆಚ್ಚಿಗೆ ಇದ್ದಂತಹ ಪ್ರಕರಣದಲ್ಲಿ ಅಂದಾಜು ಪಟ್ಟಿಯನ್ನು ಪರಿಷ್ಕೃತಗೊಳಿಸಿ 25% ಕ್ಕೆ ಮಿತಿಗೊಳಪಟ್ಟು ಬಿಲ್ ಪಾವತಿ ಮಾಡಬಹುದಾಗಿದೆ ಎಂದು ತಿಳಿಸಿದರು.

17. ಶ್ರೀ ಉದಯ ಕುಮಾರ್ ಎಂ ಹಾಗೂ ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಯು.ವಿ.ಸಿ.ಇ. ಕಟ್ಟಡದ ಜೀರ್ಣೋದ್ಧಾರಕ್ಕಾಗಿ ಸುಮಾರು ರೂ.20.00 ಕೋಟಿಯಷ್ಟು ಖರ್ಚು ಮಾಡಿದ್ದು, ಕಟ್ಟಡದ ಕಾಮಗಾರಿ ಗುಣಮಟ್ಟದ ಬಗ್ಗೆ ಮೂರನೇ ಸಂಸ್ಥೆಯಿಂದ ಪರಿವೀಕ್ಷಣೆ ನಡೆಸಿ ವರದಿ ಪಡೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸದರಿ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ವತಿಯಿಂದ ಕೈಗೊಂಡಿದ್ದು, ಪಿ.ಡಬ್ಲ್ಯೂ.ಡಿ. ನಿಯಮಾನುಸಾರ ಅವರು ಎಲ್ಲಾ ಕ್ರಮ ಕೈಗೊಳ್ಳುತ್ತಾರೆ. ಮೂರನೇ ಸಂಸ್ಥೆಯಿಂದ ಪರಿವೀಕ್ಷಣೆ ನಡೆಸಿ ವರದಿ ಬಂದ ನಂತರ ಸೂಕ್ತ ಕ್ರಮಕ್ಕಾಗಿ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು.

18. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಸ್ಥಳೀಯ ವಿಚಾರಣಾ ಸಮಿತಿಗಳು ಸಂಯೋಜಿತ ಕಾಲೇಜುಗಳ ಪರಿವೀಕ್ಷಣೆಗೆ ಭೇಟಿ ನೀಡಿದಂತ ಸಂದರ್ಭದಲ್ಲಿ, ಸಮಿತಿಯ ಸದಸ್ಯರಾದ ಹಿರಿಯ ಪ್ರಾಧ್ಯಾಪಕರೊಬ್ಬರು ಕಾಲೇಜಿನ ಶಿಕ್ಷಕರು ಹಾಗೂ ಆಡಳಿತಮಂಡಳಿಯ ಸದಸ್ಯರೊಡನೆ ಸೌಹಾರ್ದಯುತವಾಗಿ ನಡೆದುಕೊಳ್ಳದೆ ಅಲ್ಲಿನ ಶಿಕ್ಷಕರ ಬಗ್ಗೆ ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಮಾಹಿತಿ ಕೋರಿರುವ ಹಾಗೂ ಆ ಕಾಲೇಜಿನ ಆಡಳಿತಮಂಡಳಿಯ ಆಡಳಿತಕ್ಕೊಳಪಟ್ಟ ಇಂಜಿನಿಯರಿಂಗ್ ಕಾಲೇಜಿನ ಬಗ್ಗೆ ಮಾಹಿತಿಯನ್ನು ಕೋರಿದ್ದ ವಿಷಯವನ್ನು ಸದರಿ ಕಾಲೇಜಿನವರು ನನ್ನ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದರು. ಅವರು ಮುಂದುವರೆದು ಮಾತನಾಡಿ, ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಯೊಬ್ಬರು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರೊಂದಿಗೆ ಮಾತನಾಡುವಾಗ ಅಸಮಂಜಸ ಪದಗಳನ್ನು ಉಪಯೋಗಿಸುತ್ತಾರೆ ಎಂದು ತಿಳಿಸಿ ಸಂಬಂಧಪಟ್ಟ ಅಧಿಕಾರಿಗೆ ಸಂಭಾವಿತ ಭಾಷೆಯಲ್ಲಿ ಮಾತನಾಡಲು ತಿಳಿ ಹೇಳಿ ಎಂದು ಕುಲಪತಿಗಳನ್ನು ಕೋರಿದರು. ಡಾ. ಶೈಲಜ ಎಂ, ಅವರು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸಾಕಷ್ಟು ಕಾಲೇಜುಗಳಿಂದ ಮಾಹಿತಿ ಬಂದಿದ್ದು, ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಅನುಮೋದಿಸುವ ಸಂದರ್ಭದಲ್ಲಿ ಕಾಲೇಜುಗಳ ದೂರುಗಳ ಬಗ್ಗೆ ಚರ್ಚಿಸೋಣವೆಂದು ತಿಳಿಸಿದರು. ಅಸಮಂಜಸ ಭಾಷೆ ಉಪಯೋಗಿಸುವವರ ವಿರುದ್ಧ ಲಿಖಿತ ರೂಪದಲ್ಲಿ ದೂರು ನೀಡಲು ತಿಳಿಸಿದರು.

19. ಶ್ರೀ ಉದಯ ಕುಮಾರ್ ಎಂ, ಅವರು ಮಾತನಾಡಿ, ಯು.ವಿ.ಸಿ.ಇ.ಯ ಆವರಣದಲ್ಲಿ KRDL ವತಿಯಿಂದ ನಿರ್ಮಾಣವಾಗುತ್ತಿರುವ ಕಾಮಗಾರಿ ಕೆಲಸಗಳ ಗುಣಮಟ್ಟವನ್ನು ಪರಿವೀಕ್ಷಿಸಲು ರಚಿಸಲಾಗಿರುವ ಮಾನಿಟರಿಂಗ್ ಸಮಿತಿಗೆ ಅವರನ್ನು ಸದಸ್ಯರನ್ನಾಗಿ ಮಾಡಿಸಿದ್ದು, ಸಮಿತಿಯ ಸಭೆ ನಡೆದಿದೆ ಆದರೆ ಇನ್ನೂ ನಡಾವಳಿಗಳು ಬಂದಿರುವುದಿಲ್ಲ. ಇನ್ನು PRAMC ವತಿಯಿಂದ ನಡೆಯುತ್ತಿರುವ ಕಾಮಗಾರಿಗೆ ಸಂಬಂಧಪಟ್ಟಂತೆ ಸಮಿತಿ ಆಗಿರುವುದಿಲ್ಲವೆಂದು ತಿಳಿಸಿದರು.

20. ಡಾ. ಸುಧಾಕರ ಹೆಚ್ ಅವರು ಮಾತನಾಡಿ, ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಪಿ.ಜಿ. ಡಿಪ್ಲೊಮಾ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯ ನೀಡಬೇಕೆಂದು ತಿಳಿಸಿದರು.

ಕುಲಪತಿಗಳು ಮಾಹಿತಿ ನೀಡಿ ಪಿ.ಜಿ. ಡಿಪ್ಲೊಮಾ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಊಟ-ವಸತಿ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲ. ಪ್ರಸ್ತುತ ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತಿಸಲ್ಪಟ್ಟಿರುವ ನಾರ್ಥ್ ಈಸ್ಟ್ ಹಾಸ್ಟೆಲ್ ಅನ್ನು ವಿಶ್ವವಿದ್ಯಾಲಯದ ಸುಪರ್ದಿಗೆ ಬಿಟ್ಟುಕೊಟ್ಟ ನಂತರ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಲಾಗುವುದು ಎಂದರು.

21. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ರೂ.5.00 ಲಕ್ಷ ಒಳಗಿನ ಖರೀದಿಗಳನ್ನು ಸಿಂಡಿಕೇಟ್ ಗಮನಕ್ಕೆ ತರಬೇಕೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ ಕರ್ನಾಟಕ ಸರ್ಕಾರ ಹೊರಡಿಸಿರುವ KTPP ಕಾಯಿದೆಯಂತೆ ರೂ.5.00 ಲಕ್ಷ ಒಳಗಿನ ಖರೀದಿಗಳನ್ನು ಟೆಂಡರ್ ಮಾಡದೆ ಕೈಗೊಳ್ಳಬಹುದಾಗಿದೆ. ಈ ಬಗ್ಗೆ ಮಾಹಿತಿಯನ್ನು ನೀಡಲಾಗುವುದೆಂದು ತಿಳಿಸಿದರು.

22. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳ ಕೋರ್ಸ್ ವರ್ಕ್ ಶುಲ್ಕ, ಪ್ರವೇಶ ಶುಲ್ಕ ಮುಂತಾದವುಗಳನ್ನು ಕಡಿಮೆ ಮಾಡುವ ಬಗ್ಗೆ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಆದರೆ, ಸದರಿ ವಿದ್ಯಾರ್ಥಿಗಳ ಶುಲ್ಕ ಕಡಿಮೆ ಮಾಡಿರುವ ಬಗ್ಗೆ ಆದೇಶ ಹೊರಡಿಸಲಾಗಿರುವ ಬಗ್ಗೆ ಮಾಹಿತಿ ಬಯಸಿದರು. ಎಷ್ಟು ಶುಲ್ಕ ಕಡಿಮೆ ಮಾಡಬೇಕೆಂಬ ಸ್ಪಷ್ಟ ಸೂಚನೆ ಇಲ್ಲದೇ ಇರುವುದರಿಂದ ಆದೇಶ ಇನ್ನು ಹೊರಡಿಸಿರುವುದಿಲ್ಲವೆಂಬ ಅಂಶವನ್ನು ಸಿಂಡಿಕೇಟ್ ಗಮನಕ್ಕೆ ತರಲಾಯಿತು. ಚರ್ಚೆಯ ನಂತರ ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸ್ ವರ್ಕ್ ಸೇರಿ ವಿವಿಧ ಶುಲ್ಕಗಳನ್ನು ನಿಗದಿಪಡಿಸಿರುವ ಹಾಲಿ ಚಾಲ್ತಿಯಲ್ಲಿರುವ ಅಧಿಸೂಚನೆಯ ಪೂರ್ವದಲ್ಲಿ ನಿಗದಿಪಡಿಸಲಾಗಿದ್ದ ಶುಲ್ಕಗಳನ್ನು ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 3:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಲೋಕೇಶ್.ಕೆ ಇವರ ಪರೀಕ್ಷಾರ್ಥ ಅವಧಿಯನ್ನು "ತೃಪ್ತಿಕರ" ಎಂದು ಘೋಷಿಸುವ ಬಗ್ಗೆ.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಸಿಬ್ಬಂದಿಗಳಿಂದ ಗೌಪ್ಯ ಮಾಹಿತಿಯನ್ನು ಕೊಡುವ ಬಗ್ಗೆ ಆನ್-ಲೈನ್‌ನಲ್ಲಿ ನಮೂದಿಸಲು ವ್ಯವಸ್ಥೆ ಆಗಬೇಕು. ಗೌಪ್ಯ ಮಾಹಿತಿಯ ಬಗ್ಗೆ ಈಗಿರುವ Accesment Tool ಅನ್ನು ಪರಿಷ್ಕರಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರಿ ಕಛೇರಿಗಳಲ್ಲಿ ಗೌಪ್ಯ ಮಾಹಿತಿಯನ್ನು ಪಡೆಯುವ ವಿಧಾನವನ್ನು ವಿವರಿಸಿ, ಸಂಬಂಧಪಟ್ಟ Reporting ಅಧಿಕಾರಿ ಅಧೀನ ನೌಕರರ ಬಗ್ಗೆ ಸಲ್ಲಿಸುವ ವರದಿಯು ಸರಿ ಇಲ್ಲದಿದ್ದ ಪಕ್ಷದಲ್ಲಿ Review Authority ಪರಿಷ್ಕರಿಸಬಹುದಾಗಿದೆ. ಅದಾದನಂತರ Accepting ಅಧಿಕಾರಿಗಳ ಸಹಿಯೊಂದಿಗೆ ಮಂಡಿಸಲಾಗುತ್ತದೆ. ಪರೀಕ್ಷಾರ್ಥ ಅವಧಿಯನ್ನು Reporting ಅಧಿಕಾರಿಯ ವರದಿಯನ್ವಯ ಪ್ರಸ್ತುತ ಪ್ರಕರಣದಲ್ಲಿ "ತೃಪ್ತಿಕರ" ಎಂದು ಘೋಷಿಸಬಹುದಾಗಿದೆ ಎಂದು ತಿಳಿಸಿದರು. ಸಕಾರಣವಿಲ್ಲದೆ, ಪರೀಕ್ಷಾರ್ಥ ಅವಧಿಯನ್ನು ಮುಂದೂಡುವುದಕ್ಕೆ ಬರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಪ್ರಸ್ತುತ ಇರುವ Accesment Tool ನಲ್ಲಿರುವ 22 ಅಂಶಗಳೇ ಹೆಚ್ಚಾಗಿವೆ ಅದನ್ನೇ ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ವರದಿ ಪರಿಪೂರ್ಣವಾಗಿರುತ್ತದೆ. ಮುಂದಿನ ವರ್ಷದಿಂದ ಸದರಿ ಗೌಪ್ಯ ಮಾಹಿತಿಯನ್ನು ಆನ್-ಲೈನ್ ಮೂಲಕ ಪಡೆಯಲು ಯೋಜಿಸಬಹುದಾಗಿದೆ ಎಂದರು.

*ನಿರ್ಣಯ*

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಲೋಕೇಶ್.ಕೆ, ಗ್ರೂಪ್ ಡಿ ನೌಕರರು, ಜೀವರಸಾಯನಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1977(3) ಪ್ರಕಾರ ದಿನಾಂಕ 06-08-2021 ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 4:** ಶ್ರೀಮತಿ ನಾಗರತ್ನ.ಎಂ, ದಿವಂಗತ ಶ್ರೀ ಚಾಮಪ್ಪ, ಗ್ರೂಪ್ 'ಡಿ' ರವಾನೆ ಮತ್ತು ಸ್ವೀಕಾರ ವಿಭಾಗ, ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಡಾ. ಗೋವಿಂದರಾಜು ರವರು ಮಾತನಾಡಿ ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾಡುವ ಬಗ್ಗೆ ಅನುಸರಿಸುವ ವಿಧಾನದ ಬಗ್ಗೆ ಮಾಹಿತಿ ಬಯಸಿದರು. ಶ್ರೀ ಗೋಪಿನಾಥ್ ಅವರು ಮಾತನಾಡಿ, ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾಡುವ ಬಗ್ಗೆ ಒಂದು ಮಾರ್ಗಸೂಚಿಯನ್ನು ಸಿದ್ದಪಡಿಸಲು

**ವಿಷಯ ಸಂಖ್ಯೆ 3:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಲೋಕೇಶ್.ಕೆ ಇವರ ಪರೀಕ್ಷಾರ್ಥ ಅವಧಿಯನ್ನು "ತೃಪ್ತಿಕರ" ಎಂದು ಘೋಷಿಸುವ ಬಗ್ಗೆ.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಸಿಬ್ಬಂದಿಗಳಿಂದ ಗೌಪ್ಯ ಮಾಹಿತಿಯನ್ನು ಕೊಡುವ ಬಗ್ಗೆ ಆನ್-ಲೈನ್‌ನಲ್ಲಿ ನಮೂದಿಸಲು ವ್ಯವಸ್ಥೆ ಆಗಬೇಕು. ಗೌಪ್ಯ ಮಾಹಿತಿಯ ಬಗ್ಗೆ ಈಗಿರುವ Accesment Tool ಅನ್ನು ಪರಿಷ್ಕರಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರಿ ಕಛೇರಿಗಳಲ್ಲಿ ಗೌಪ್ಯ ಮಾಹಿತಿಯನ್ನು ಪಡೆಯುವ ವಿಧಾನವನ್ನು ವಿವರಿಸಿ, ಸಂಬಂಧಪಟ್ಟ Reporting ಅಧಿಕಾರಿ ಅಧೀನ ನೌಕರರ ಬಗ್ಗೆ ಸಲ್ಲಿಸುವ ವರದಿಯು ಸರಿ ಇಲ್ಲದಿದ್ದ ಪಕ್ಷದಲ್ಲಿ Review Authority ಪರಿಷ್ಕರಿಸಬಹುದಾಗಿದೆ. ಅದಾದನಂತರ Accepting ಅಧಿಕಾರಿಗಳ ಸಹಿಯೊಂದಿಗೆ ಮಂಡಿಸಲಾಗುತ್ತದೆ. ಪರೀಕ್ಷಾರ್ಥ ಅವಧಿಯನ್ನು Reporting ಅಧಿಕಾರಿಯ ವರದಿಯನ್ವಯ ಪ್ರಸ್ತುತ ಪ್ರಕರಣದಲ್ಲಿ "ತೃಪ್ತಿಕರ" ಎಂದು ಘೋಷಿಸಬಹುದಾಗಿದೆ ಎಂದು ತಿಳಿಸಿದರು. ಸಕಾರಣವಿಲ್ಲದೆ, ಪರೀಕ್ಷಾರ್ಥ ಅವಧಿಯನ್ನು ಮುಂದೂಡುವುದಕ್ಕೆ ಬರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಪ್ರಸ್ತುತ ಇರುವ Accesment Tool ನಲ್ಲಿರುವ 22 ಅಂಶಗಳೇ ಹೆಚ್ಚಾಗಿವೆ ಅದನ್ನೇ ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ವರದಿ ಪರಿಪೂರ್ಣವಾಗಿರುತ್ತದೆ. ಮುಂದಿನ ವರ್ಷದಿಂದ ಸದರಿ ಗೌಪ್ಯ ಮಾಹಿತಿಯನ್ನು ಆನ್-ಲೈನ್ ಮೂಲಕ ಪಡೆಯಲು ಯೋಜಿಸಬಹುದಾಗಿದೆ ಎಂದರು.

***ನಿರ್ಣಯ***

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಲೋಕೇಶ್.ಕೆ, ಗ್ರೂಪ್ ಡಿ ನೌಕರರು, ಜೀವರಸಾಯನಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1977(3) ಪ್ರಕಾರ ದಿನಾಂಕ 06-08-2021 ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.



**ವಿಷಯ ಸಂಖ್ಯೆ 4:** ಶ್ರೀಮತಿ ನಾಗರತ್ನ.ಎಂ, ದಿವಂಗತ ಶ್ರೀ ಚಾಮಪ್ಪ, ಗ್ರೂಪ್ 'ಡಿ' ರವಾನೆ ಮತ್ತು ಸ್ವೀಕಾರ ವಿಭಾಗ, ಇವರ ಪತ್ನಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಡಾ. ಗೋವಿಂದರಾಜು ರವರು ಮಾತನಾಡಿ ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾಡುವ ಬಗ್ಗೆ ಅನುಸರಿಸುವ ವಿಧಾನದ ಬಗ್ಗೆ ಮಾಹಿತಿ ಬಯಸಿದರು. ಶ್ರೀ ಗೋಪಿನಾಥ್ ಅವರು ಮಾತನಾಡಿ, ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾಡುವ ಬಗ್ಗೆ ಒಂದು ಮಾರ್ಗಸೂಚಿಯನ್ನು ಸಿದ್ಧಪಡಿಸಲು

ಹಾಗೂ ಅರ್ಜಿಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕು ಎಂದು ತಿಳಿಸಿದರು. ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ ಅವರು ಮಾತನಾಡಿ, ಅನುಕಂಪದ ಆಧಾರದ ಮೇಲಿನ ನೇಮಕಾತಿ ಮಾಡಲಾದ ನೌಕರರು ಸಲ್ಲಿಸುವ ದಾಖಲೆಗಳು ನಕಲಿಯಾಗಿದ್ದರೆ ತೆಗೆದುಕೊಳ್ಳುವ ಕ್ರಮದ ಬಗ್ಗೆ ಮಾಹಿತಿ ಬಯಸಿದರು.

ಕುಲಸಚಿವರು ಮಾತನಾಡಿ ಅನುಕಂಪ ಆಧಾರದ ಮೇಲೆ ಮೃತ ನೌಕರರ ಅವಲಂಬಿತರ ನೇಮಕಾತಿಗೆ ಪರಿಗಣಿಸುವ ಅನುಸರಿಸಬೇಕಾದ ವಿಧಾನ ಹಾಗೂ ನಕಲಿ ದಾಖಲೆಗಳನ್ನು ಸಲ್ಲಿಸಿದ್ದ ಪಕ್ಷದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳನ್ನು ವಿವರಿಸಿದರು, ಹಾಗೂ ಅನುಕಂಪ ಆಧಾರಿತ ನೇಮಕವನ್ನು ನೇರ ನೇಮಕಾತಿಗೆ ಮೀಸಲಿರಿಸಿದ ಖಾಲಿ ಹುದ್ದೆಗಳ ಎದುರಾಗಿ ಮಾಡಲಾಗುತ್ತದೆ ಎಂದು ತಿಳಿಸಿದರು. ಅವರು ಮುಂದುವರೆದು, ಅನುಕಂಪ ಆಧಾರಿತ ನೇಮಕ ಮಾಡುವ ಅನುಸರಿಸುವ ಕ್ರಮಗಳ ಬಗ್ಗೆ ಸರ್ಕಾರ ಈಗಾಗಲೇ ನಿಯಮ ಹಾಗೂ ಸುತ್ತೋಲೆಗಳನ್ನು ಹೊರಡಿಸಿದೆ, ಇವುಗಳ ಅನ್ವಯ ಕ್ರಮಕೈಗೊಳ್ಳಬೇಕಾಗುತ್ತದೆಂದು ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ ದಿವಂಗತ ಚಾಮಪ್ಪ, ಗ್ರೂಪ್ 'ಡಿ' ರವಾನೆ ಮತ್ತು ಸ್ವೀಕಾರ ವಿಭಾಗ, ಇವರ ಪತ್ನಿ ಶ್ರೀಮತಿ ನಾಗರತ್ನ ಎಂ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು, ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.



**ವಿಷಯ ಸಂಖ್ಯೆ 5:** ಶ್ರೀ ರಾಕೇಶ್, ಪಿ.ಎಸ್ ದಿವಂಗತ ಶ್ರೀ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ–3 ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 6:** ಶ್ರೀ ಚೇತನ್.ಯು, ದಿವಂಗತ ಶ್ರೀ. ಉಮಾಶಂಕರ್.ಆರ್, ಕಿರಿಯ ಸಹಾಯಕರು, ಪಿ.ಜಿ ಹಾಸ್ಟೆಲ್–1, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಹಿಂದೆ ಅಂದರೆ, 1996ರ ನಂತರ ಅರ್ಹ ವಿದ್ಯಾರ್ಹತೆ ಇದ್ದರೂ ಸಹ, ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡಿದ್ದ, 84 ಜನ ನೌಕರರ ವಿಚಾರವಾಗಿ ಸರ್ಕಾರ ಕಾನೂನು ಇಲಾಖೆಯ ಅಭಿಪ್ರಾಯ ಪಡೆದುಕೊಂಡು ಸದರಿ ವಿಷಯದ ಬಗ್ಗೆ ಸಿಂಡಿಕೇಟ್ ಮುಂದೆ ಮಂಡಿಸಿ, ಸಿಂಡಿಕೇಟ್ ನಿರ್ಣಯ ತೆಗೆದುಕೊಳ್ಳಲು ಪತ್ರ ಬರೆದಿದೆ. ಈ ಹಿಂದೆ ಕೆಲವು

ಸಿಬ್ಬಂದಿಗಳಿಗೆ ಅನುಕಂಪದ ಆಧಾರದ ಮೇಲೆ ಗ್ರೂಪ್ ಸಿ ಹುದ್ದೆಗೆ ನೇಮಕ ಮಾಡಲಾಗಿದೆ, ಮತ್ತೆ ಕೆಲವರು ನ್ಯಾಯಾಲಯದ ಆದೇಶದ ಮೇಲೆ ಗ್ರೂಪ್ ಸಿ ಹುದ್ದೆಗೆ ನೇಮಕಗೊಂಡಿದ್ದಾರೆ. ಈ ಕಾರಣದಿಂದಾಗಿ, ನೇಮಕಾತಿ ಸಮಯದಲ್ಲಿ ಅರ್ಹ ವಿದ್ಯಾರ್ಹತೆ ಹೊಂದಿದ್ದು ಗ್ರೂಪ್ ಡಿ ಹುದ್ದೆಗೆ ನೇಮಕಗೊಂಡಿದ್ದ 87 ಸಿಬ್ಬಂದಿಯನ್ನು ಗ್ರೂಪ್ ಸಿ ಹುದ್ದೆಯೆಂದು ಪರಿಗಣಿಸಿ ಹೊರಡಿಸಿದ್ದ ವಿಶ್ವವಿದ್ಯಾಲಯದ ಆದೇಶದ ವಿರುದ್ಧ ಸರ್ಕಾರವು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ (10)ರ ಅಡಿಯಲ್ಲಿ ಸದರಿ ಆದೇಶವನ್ನು ರದ್ದುಪಡಿಸಲು ಕಾರಣ ಕೇಳುವ ಸೂಚನಾ ಪತ್ರ ನೀಡಿತ್ತು, ನಂತರ ನಾನು ಸರ್ಕಾರಕ್ಕೆ ಸಲ್ಲಿಸಿದ ವಿವರವಾದ ವರದಿಯನ್ನು ಪರಿಶೀಲಿಸಿ, ವಿಶ್ವವಿದ್ಯಾಲಯವು ಹೊರಡಿಸಿದ್ದ ಆದೇಶವನ್ನು ರದ್ದುಪಡಿಸದೆ, ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು, ಸಿಂಡಿಕೇಟ್ ಮುಂದೆ ಮಂಡಿಸಿ ನಿರ್ಣಯ ತೆಗೆದುಕೊಳ್ಳಲು ಸರ್ಕಾರದ ತನ್ನ ಪತ್ರ ಸಂಖ್ಯೆ ಇಡಿ 6 ಯುಬಿವಿ 2020 ದಿನಾಂಕ: 15-11-2021ರ ಪತ್ರದಲ್ಲಿ ನಿರ್ದೇಶಿಸಿದೆ. ಈ ಬಗ್ಗೆ ಸರ್ಕಾರದೊಂದಿಗೆ ನಾನೂ ಮಾತನಾಡಿದ್ದು, ಸದರಿ ವಿಷಯವನ್ನು ಈಗಾಗಲೇ ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಸಿಬ್ಬಂದಿಗಳು ಹಾಗೂ ನೇಮಕವಾಗಬೇಕಾಗಿರುವ ಅಭ್ಯರ್ಥಿಗಳು ಸೇರಿ ಯಾರಿಗೂ ತೊಂದರೆಯಾಗದಂತೆ ಸೌಹಾರ್ದಯುತವಾಗಿ ಸಾಮಾಜಿಕ ನ್ಯಾಯಿಕ ದೃಷ್ಟಿಯಿಂದ ಬಗೆಹರಿಸಲು ನನಗೆ ಸೂಚನೆ ನೀಡಿದ್ದಾರೆ. ಈ ವಿಷಯವನ್ನು ಸಿಂಡಿಕೇಟ್ ಮುಂದೆ ನಾನು ತಿಳಿಸುತ್ತಿದ್ದೇನೆ. ನಾನು ಮಾತನಾಡಿದ ವಿಷಯ ವಿಡಿಯೋ ರೆಕಾರ್ಡಿಂಗ್ ಕೂಡ ಆಗುತ್ತಿದೆ ಎಂದು ತಿಳಿಸಿದರು. ಆದಕಾರಣ, ಈಗಾಗಲೇ ನೇಮಕಾತಿ ಸಂದರ್ಭದಲ್ಲಿ ಅರ್ಹ ವಿದ್ಯಾರ್ಹತೆ ಇದ್ದರೂ ಗ್ರೂಪ್ ಡಿ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ 87 ಸಿಬ್ಬಂದಿಗಳಿಗೆ ಅನ್ಯಾಯವಾಗದ ಹಾಗೆ ನಿರ್ಣಯ ತೆಗೆದುಕೊಳ್ಳಬೇಕೆಂದರು. ಅವರು ಮುಂದುವರೆದು, ಉದಾಹರಣೆ ನೀಡಿ, ಎಂ.ಎಸ್ಸಿ. ಪಿ.ಹೆಚ್.ಡಿ. ಹೊಂದಿರುವ ಡಾ. ಕುಸುಮ್ ರಾಮಚಂದ್ರನ್ ಅವರನ್ನು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ ನೇಮಕ ಮಾಡಲಾಗಿದೆ. ಪ್ರಸ್ತುತ ಪಿ.ಯು.ಸಿ. ಆದ ಅಭ್ಯರ್ಥಿಯನ್ನು ಕಿರಿಯ ಸಹಾಯಕರಾಗಿ ಹಾಗೂ ಪದವಿ ಹೊಂದಿರುವ ಅಭ್ಯರ್ಥಿಯನ್ನು ಸಹಾಯಕರನ್ನಾಗಿ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿದರೆ, ಹಿಂದೆ ಅನುಕಂಪದ ಆಧಾರದ ಮೇಲೆ ನೇಮಕಗೊಂಡವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಅನುಕಂಪ ಆಧಾರಿತ ವಿಷಯದಲ್ಲಿ ಘನ ಉಚ್ಚ ನ್ಯಾಯಾಲಯದ ಕೆಲವು ಆದೇಶಗಳಲ್ಲಿ ಹಿಂದೆ ಆಗಿರುವ ತಪ್ಪನ್ನು ಸರಿಪಡಿಸಬಹುದೆಂದು ಆದೇಶವಿದೆ, ಸಂಬಂಧಪಟ್ಟ ಆದೇಶಗಳ ಪ್ರತಿಯನ್ನು ಸಹ ಒದಗಿಸಲಾಗುವುದು. ಆದುದರಿಂದ, ಈ ಎಲ್ಲಾ ವಿಷಯಗಳನ್ನು ಪರಿಗಣಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಬಹುದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರದ ಆದೇಶಾನುಸಾರ ಒಮ್ಮೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡಿರುವ ನೇಮಕಾತಿಯನ್ನು ಗ್ರೂಪ್ 'ಸಿ' ಎಂದು ಪುನರ್-ಪರಿಗಣಿಸಿ ಆದೇಶ ನೀಡಲು ಅವಕಾಶವಿರುವುದಿಲ್ಲ. ಸರ್ಕಾರದ ವೇತನಾನುದಾನ ಪಡೆಯುವಾಗ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಅನುಕಂಪ ಆಧಾರದ ನೇಮಕಾತಿಯನ್ನು ಒಂದು ವಾಡಿಕೆ ರೀತಿಯಲ್ಲಿ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು. ಪ್ರೊ. ಪಿ ದೀಪಾ ಶಣೈ, ಪ್ರೊ. ಟಿ.ವಿ. ರಾಜು ಮತ್ತು ಡಾ. ಗೋವಿಂದರಾಜು ಅವರು ಮಾತನಾಡಿ, ಅನುಕಂಪ ಆಧಾರದ ನೇಮಕಾತಿಯನ್ನು ಕಾನೂನಾತ್ಮಕವಾಗಿ ಮಾಡಲು ಒಂದು ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಬೇಕೆಂದು ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ, ಅನುಕಂಪ ಆಧಾರಿತ ನೇಮಕಾತಿಯ ಬಗ್ಗೆ ಚರ್ಚಿಸಲು ಒಂದು ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಲು ಹಾಗೂ ಮೇಲ್ಕಂಡ ಕಾರ್ಯಸೂಚಿ ಸೇರಿ ಎಲ್ಲಾ ವಿಷಯಗಳನ್ನು ಸದರಿ ಸಭೆಯ ಮುಂದೆ ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.



**ವಿಷಯ ಸಂಖ್ಯೆ.7** :ಶ್ರೀ ಭೀಮರಾವ್, ಶ್ರೀ ಕೆ. ಲಿಂಗರಾಜು ಮತ್ತು ಶ್ರೀ ಎಂ. ಕುಮಾರ, ಗ್ರೂಪ್ 'ಡಿ' ನೌಕರರಿಗೆ ಪ್ರಭಾರ ಭತ್ಯೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಡಾ. ಗೋವಿಂದರಾಜು ಅವರು ಮಾತನಾಡಿ, ಗ್ರೂಪ್ 'ಡಿ' ನೌಕರರಿಗೆ ಚಾಲಕ ಹುದ್ದೆಯ ಕರ್ತವ್ಯ ನಿರ್ವಹಿಸುತ್ತಿರುವುದಕ್ಕೆ ಪ್ರಭಾರ ಭತ್ಯೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಹೆಚ್ಚುವರಿ ಕೆಲಸಕ್ಕೆ ಬೇರೆ ರೀತಿ ಭತ್ಯೆ ಮಂಜೂರು ಮಾಡಲು ಅವಕಾಶವನ್ನು ಪರಿಶೀಲಿಸಬಹುದಾಗಿದೆ. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕೆಂದು ಸಲಹೆ ನೀಡಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಸಿಬ್ಬಂದಿಯ ಸಂಖ್ಯೆ ಎಲ್ಲಾ ವಿಭಾಗಗಳಲ್ಲಿ ಕಡಿಮೆ ಇದೆ. ಪ್ರತಿ ವಿಭಾಗದಲ್ಲಿ ಕನಿಷ್ಠ ಒಬ್ಬ ಸಹಾಯಕ/ ಕಿರಿಯ ಸಹಾಯಕ, ಡ್ಯಾಟಾ ಎಂಟ್ರಿ ಆಪರೇಟರ್, ಗ್ರೂಪ್ 'ಡಿ' ನೌಕರರು ಇರಬೇಕಾಗುತ್ತದೆ. ವಿಭಾಗಗಳಲ್ಲಿ ಕೆಲವೊಂದು ದಾಖಲೆಗಳಿಗೆ ಅಧೀಕ್ಷಕರು ಸಹಿ ಮಾಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅಧೀಕ್ಷಕರ ಅವಶ್ಯಕತೆ ಇರುತ್ತದೆ. ಗ್ರೂಪ್ 'ಡಿ' ಹುದ್ದೆಗಳಲ್ಲಿ ಕೆಲವನ್ನು ಮೇಲ್ದರ್ಜೆಗೆ ಏರಿಸಿದಲ್ಲಿ ಮೇಲಿನ ಹುದ್ದೆಗಳನ್ನು ಹೆಚ್ಚು ಮಾಡಬಹುದಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಮೇಲ್ದರ್ಜೆಯ ಹುದ್ದೆಗಳನ್ನು ಹೆಚ್ಚು ಮಾಡಿಕೊಂಡಿದೆ. ಅದೇ ರೀತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಸಹ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡಲು ರಚಿಸಿರುವ ಸಮಿತಿಯ ಸಭೆಯನ್ನು ಆದಷ್ಟು ಬೇಗ ಕರೆಯುವುದಾಗಿ ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ, ಕೆ.ಸಿ.ಎಸ್.ಆರ್. ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ಗ್ರೂಪ್ 'ಡಿ' ನೌಕರರಿಗೆ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುವುದಕ್ಕೆ ಪ್ರಭಾರ ಭತ್ಯೆಯನ್ನು ನೀಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ತಿರಸ್ಕರಿಸಿತು.



**ವಿಷಯ ಸಂಖ್ಯೆ 8:** ಶ್ರೀ ಎನ್. ಚಂದ್ರಶೇಖರ್, ಫೋರ್‌ಮನ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗ, ಯು.ವಿ.ಸಿ.ಇ ಇವರಿಗೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ವಿಸ್ತರಿಸುವ ಬಗ್ಗೆ.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಂಜೂರಾಗಿರುವ ವರ್ಕ್ ಷಾಪ್ ಸೂಪರಿಂಟೆಂಡೆಂಟ್, ಫೋರ್‌ಮನ್ ಮತ್ತು ಇನ್ಸ್‌ಟ್ರಕ್ಟರ್ ಹುದ್ದೆಗಳು ಬೋಧಕೇತರ ವೃಂದದ ಹುದ್ದೆಗಳಾಗಿದ್ದು, ಕರ್ನಾಟಕ ಸರ್ಕಾರ ನಿಗದಿಪಡಿಸುವ ವೇತನ ಶ್ರೇಣಿಯನ್ನು ಹೊಂದಿರುತ್ತವೆ. ಆದರೆ, ಇತ್ತೀಚೆಗೆ ಎ.ಐ.ಸಿ.ಟಿ.ಇ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಸದರಿ ಹುದ್ದೆಗಳು ಬೋದಕ ಹುದ್ದೆಗಳಿಗೆ ಸಮಾನಾಂತರ ಹುದ್ದೆಗಳೆಂದು ಪರಿಗಣಿಸಲಾಗಿದೆ. ಇದರ ಲಾಭ ಪಡೆದುಕೊಂಡು ಯು.ವಿ.ಸಿ.ಇ. ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿಗಳು ನಿವೃತ್ತಿಯಾಗುವ ಒಂದು ದಿನ ಮುಂಚಿತವಾಗಿ ನ್ಯಾಯಾಲಯದಿಂದ 62 ವರ್ಷಗಳ ವರೆಗೆ ನಿವೃತ್ತಿ ವಯಸ್ಸು ಪರಿಗಣಿಸುವ ಕುರಿತು ಮಧ್ಯಂತರ ಆದೇಶ ಪಡೆದುಕೊಂಡು ಬರುತ್ತಾರೆ. ಸದರಿ ರಿಟ್ ಅರ್ಜಿಗಳಲ್ಲಿ ಅಂತಿಮ ತೀರ್ಪು ಬರುವುದರೊಳಗಾಗಿ ಅವರುಗಳಿಗೆ 62 ವರ್ಷ ಮೀರಿರುತ್ತದೆ. ಈ ಕಾರಣದಿಂದಾಗಿ ಬಹುತೇಕ ಪ್ರಕರಣಗಳಲ್ಲಿ ನೌಕರರ ಪರವಾಗಿ ತೀರ್ಪುಗಳು ಬಂದಿರುತ್ತವೆ. ಅದೇ ಪ್ರಕರಣದಂತೆ ಶ್ರೀ ಎನ್. ಚಂದ್ರಶೇಖರ್, ಫೋರ್‌ಮನ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗ, ಯು.ವಿ.ಸಿ.ಇ ಇವರದ್ದೂ ಒಂದಾಗಿದೆ. ಪ್ರಸ್ತುತ ಶ್ರೀ ಮುನಿರಾಜು ಎಂಬುವವರ ಪ್ರಕರಣದಲ್ಲಿ ಮುಂಚಿತವಾಗಿ ಕ್ರಮ ತೆಗೆದುಕೊಂಡು ನ್ಯಾಯಾಲಯದಲ್ಲಿ ಕೇವಿಯಟ್ ಅರ್ಜಿಯನ್ನು ಸಲ್ಲಿಸಿರುವುದರಿಂದ ಇಲ್ಲಿಯವರೆಗೆ ಯಾವುದೇ ಮಧ್ಯಂತರ ಆದೇಶ ದೊರತಿರುವುದಿಲ್ಲ ಎಂದು ತಿಳಿಸಿ ಇತರ ಪ್ರಕರಣಗಳ ಬಗ್ಗೆ ಮಾಹಿತಿ ನೀಡಿದರು.

ಡಾ. ಗೋವಿಂದರಾಜು ಮತ್ತು ಶ್ರೀ ಉದಯ ಕುಮಾರ್ ಎಂ ಅವರುಗಳು ಮಾತನಾಡಿ, ವಿಶ್ವವಿದ್ಯಾಲಯದ ವಕೀಲರು ಸಮರ್ಥವಾಗಿ ವಾದ ಮಂಡಿಸದ ಕಾರಣ, ಈ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯದ ವಿರುದ್ಧ ತೀರ್ಪು ಬರುತ್ತದೆ. ಆದಕಾರಣ ಇವರುಗಳ ವಿರುದ್ಧ ಘನ ಉಚ್ಚ ನ್ಯಾಯಾಲಯದ ಮೇಲ್ಮನವಿ ಸಲ್ಲಿಸಲು ತಿಳಿಸಿದರು.

ಕುಲಸಚಿವರು ಮಾತನಾಡಿ, ಶ್ರೀ ಮರಿಗೌಡ ಮತ್ತು ಶ್ರೀ ನಾಗರಾಜ್ ಅವರಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಸಲ್ಲಿಸಿದ್ದ ಅಪೀಲು 2014 ರಲ್ಲಿ ತಿರಸ್ಕೃತವಾಗಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರಿಂದ ಅವರಿಗೆ ನ್ಯಾಯಾಲಯದ ಆದೇಶದಂತೆ ವೇತನ ಭತ್ಯೆಗಳನ್ನು ಮಂಜೂರು ಮಾಡಿದ್ದರೂ ಸಹ ಒಂದು ರಿವ್ಯೂ

ಪಿಟೀಷನ್ ಅನ್ನು ಹಾಕಲಾಗಿದೆ. ರಿವ್ಯೂ ಪಿಟೀಷನ್‌ನಲ್ಲಿ ಸೋತರೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಶ್ರೀ ಎನ್ ಚಂದ್ರಶೇಖರ್ ಅವರ ಸೇವೆಯನ್ನು ನ್ಯಾಯಾಲಯದ ಮಧ್ಯಂತರ ಆದೇಶದ ಪ್ರಕಾರ ದಿನಾಂಕ: 05-03-2018 ರ ವಿಶ್ವವಿದ್ಯಾಲಯದ ಆದೇಶದಲ್ಲಿ 01-05-2017 ರಿಂದ ಜಾರಿಗೆ ಬರುವಂತೆ ಮುಂದುವರೆಸಲಾಗಿತ್ತು. ದಿನಾಂಕ: 01-05-2017 ರಿಂದ 07-03-2018 ರವರೆಗೆ ಅವರು ಕಛೇರಿ ಕೆಲಸಕ್ಕೆ ಹಾಜರಾಗಿಲ್ಲದಿರುವ ಅವಧಿಯನ್ನು ಸೇವಾ ಅವಧಿಯನ್ನು ಪರಿಗಣಿಸಿ, ವೇತನ ಹಿಂದೆ ನೀಡಿದ್ದಾರೆ. ಇದು ನ್ಯಾಯಾಲಯದ ಪ್ರಕರಣವಾದ್ದರಿಂದ ಈಗ ಯಾರಮೇಲೂ ಜವಾಬ್ದಾರಿಯನ್ನು ವಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮುಂದಿನ ಎಲ್ಲಾ ಪ್ರಕರಣಗಳಲ್ಲಿ ಅಪೀಲು ಸಲ್ಲಿಸಲು ಕ್ರಮ ವಹಿಸಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬಹುದಾಗಿದೆ ಎಂದು ತಿಳಿಸಿದರು.

*ನಿರ್ಣಯ*

ದೀರ್ಘ ಚರ್ಚೆಯ ನಂತರ, ಯು.ವಿ.ಸಿ.ಇಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕೇತರ ಸಿಬ್ಬಂದಿ ಎ.ಐ.ಸಿ.ಟಿ.ಇ. ವೇತನ ಶ್ರೇಣಿ ಹಾಗೂ ಶಿಕ್ಷಕರಿಗೆ ಅನ್ವಯವಾಗುವಂತೆ ನಿವೃತ್ತಿ ವಯಸ್ಸನ್ನು 62 ವರ್ಷಕ್ಕೆ ನಿಗದಿಪಡಿಸಿರುವ ಕುರಿತು ಘನ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ಅಥವಾ ಅಂತಿಮ ಆದೇಶವನ್ನು ತಂದಂತಹ ಪ್ರಕರಣಗಳಲ್ಲಿ ಕಡ್ಡಾಯವಾಗಿ ಮೇಲ್ಮನವಿ ಸಲ್ಲಿಸಬೇಕೆಂದು ಹಾಗೂ ಸಂಬಂಧಪಟ್ಟ ವಕೀಲರಿಗೆ ಸರಿಯಾದ ರೀತಿ ವಾದ ಮಂಡಿಸಲು ದಾಖಲೆಗಳನ್ನು ನೀಡಬೇಕೆಂದು ಸಿಂಡಿಕೇಟ್ ಸೂಚಿಸಿತು.

ಈ ಹಂತದಲ್ಲಿ ಶ್ರೀ ಗೋಪಿನಾಥ್ ಅವರು ಮಾತನಾಡಿ ಕೆಲವೊಂದು ವಿಷಯಗಳ ಬಗ್ಗೆ ಕಾರ್ಯಸೂಚಿಯಾಗಿ ಮಂಡಿಸಬೇಕೆಂದು ಪತ್ರ ಕಳುಹಿಸಿದ್ದರೂ ಅವುಗಳನ್ನು ಕಾರ್ಯಸೂಚಿಯಾಗಿ ಸಭೆಯ ಮುಂದೆ ಮಂಡಿಸಿರುವುದಿಲ್ಲವೆಂದು ತಿಳಿಸಿದರು.

ಸಭಾಧ್ಯಕ್ಷರು ಮಾತನಾಡಿ, ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಬೇಕಾದ ಕಾರ್ಯಸೂಚಿಗಳನ್ನು ಮಂಡಿಸಬೇಕೆ ಅಥವಾ ಬೇಡವೆ ಎಂಬುದರ ಬಗ್ಗೆ ನಿರ್ಧರಿಸುವುದು ಕುಲಪತಿಗಳು ಎಂದು ತಿಳಿಸಿದರು. ಅವರು ಮುಂದುವರೆದು, ಪ್ರಾಧ್ಯಾಪಕರ ಹುದ್ದೆಗೆ ನನ್ನ ನೇಮಕಾತಿ ಆಗಿ 20 ವರ್ಷಗಳು ಆಗಿದ್ದು, ಸದರಿ ವಿಷಯವನ್ನು ಈಗಿನ ಕೆಲವು ಸಿಂಡಿಕೇಟ್ ಸದಸ್ಯರು ಸಿಂಡಿಕೇಟ್ ಮುಂದೆ ಮಂಡಿಸಬೇಕೆಂದು ಪತ್ರ ನೀಡಿದ್ದಾರೆ, ಅಂತಹ ವಿಷಯಗಳನ್ನು ಸಿಂಡಿಕೇಟ್ ಮುಂದೆ ಮಂಡಿಸುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದರು.

ಡಾ. ಗೋವಿಂದರಾಜು ಅವರು ಮಾತನಾಡಿ, ಅವರು ಕೇಳುತ್ತಿರುವ ವಿಷಯ ವಿದ್ಯಾರ್ಥಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಷಯಗಳನ್ನು ಸಿಂಡಿಕೇಟ್‌ಗೆ ಮಂಡಿಸಲು ಕೋರುತ್ತಿರುವುದಾಗಿ ತಿಳಿಸಿದರು. ಕುಲಪತಿಗಳು ಉತ್ತರಿಸಿ ಅಂತಹ ವಿಷಯವಿದ್ದರೆ, ಮತ್ತೊಂದು ಪತ್ರ ನೀಡಿದಲ್ಲಿ ಸಿಂಡಿಕೇಟ್ ಸಭೆಯ ಮುಂದೆ ಕಾರ್ಯಸೂಚಿಯನ್ನು ತರಲಾಗುವುದು ಎಂದರು.

ಶ್ರೀ ಗೋಪಿನಾಥ್ ಅವರು ಮಾತನಾಡಿ, ಎಂ.ಎಸ್.ಡಬ್ಲ್ಯೂ ಕೋರ್ಸಿನ ಪ್ರವೇಶಕ್ಕೆ ಅರ್ಹತೆಯನ್ನು ತಿದ್ದುಪಡಿ ಮಾಡಲು ಪತ್ರ ನೀಡಿದ್ದು, ಸದರಿ ನಿಯಮವನ್ನು ಹಿಂದಿನಂತೆ ತಿದ್ದುಪಡಿ ಮಾಡಿ ಎಲ್ಲಾ

ಪದವೀಧರರು ಸದರಿ ಕೋರ್ಸಿನ ಪ್ರವೇಶಕ್ಕೆ ಅರ್ಹರೆಂದು ಪರಿಗಣಿಸಿದರೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲವಾಗುತ್ತದೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಸದರಿ ವಿಷಯವು ಅಧ್ಯಯನ ಮಂಡಳಿಯಲ್ಲಿ ಮಾತ್ರ ಅನುಮೋದನೆಗೊಂಡಿದ್ದು, ಸಂಬಂಧಪಟ್ಟ ನಿಕಾಯ ಮತ್ತು ವಿದ್ಯಾವಿಷಯಕ ಪರಿಷತ್ತಿನಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗುತ್ತದೆ. ಸರ್ಕಾರದ ಅನುಮೋದನೆ ಪಡೆದ ನಂತರ ಮುಂದಿನ ವರ್ಷಕ್ಕೆ ಜಾರಿಯಾಗುತ್ತದೆ ಎಂದು ತಿಳಿಸಿದರು.

***Proceedings of the 161st Adjourned meeting of the Syndicate held on 17.11.2021***

**ವಿಷಯ ಸಂಖ್ಯೆ 9:** ಅಭಿಮತದ ಆಯ್ಕೆ ಅನುಸಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಬೋಧಕರನ್ನು ಮಾತೃ ವಿಶ್ವವಿದ್ಯಾಲಯಕ್ಕೆ ಮರು ವರ್ಗಾವಣೆ ಕೋರಿರುವ ಬಗ್ಗೆ.

ಕುಲಸಚಿವರು ಮಾತನಾಡಿ, ಸಿಬ್ಬಂದಿಗಳು ಬೆಂಗಳೂರು ವಿಶ್ವವಿದ್ಯಾಲಯದ ತ್ರಿಭಜನೆಯ ನಂತರ, ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳಿಗೆ ಸೇವೆಗೆ ಸೇರಲು ಅಭಿಮತ/ಆಯ್ಕೆ ವ್ಯಕ್ತಪಡಿಸಿದ ಸಂಬಂಧದಲ್ಲಿ, ಕರ್ನಾಟಕ ಸರ್ಕಾರ ಹೊರಡಿಸಿದ ಆದೇಶದಲ್ಲಿ, ಆ ವಿಶ್ವವಿದ್ಯಾಲಯಗಳಿಗೆ ವರ್ಗಾವಣೆಗೊಂಡ ನೌಕರರು ಅವರ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳಲು ಅನುಮೋದನೆ ನೀಡಿದೆ. ಆಕಾರಣದಿಂದಾಗಿ ಡಾ. ಜಲಜ ಮತ್ತು ಡಾ. ಮುನಿರಾಜು ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವಾಪಸ್ಸು ಬರಲು ಅವರ ಲೀನ್ ಅವಧಿಯೊಳಗೆ ಅಭಿಮತ ವ್ಯಕ್ತಪಡಿಸಿರುವುದರಿಂದ ಅವರ ಮನವಿಯನ್ನು ಪರಿಗಣಿಸಲೇ ಬೇಕಾಗಿರುತ್ತದೆ ಎಂದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ನಂತರ ಕ್ರಮ ಕೈಗೊಳ್ಳಲು ತಿಳಿಸಿದರು.

ಕುಲಪತಿಗಳು ಮಾತನಾಡಿ, ಮೇಲ್ಕಂಡ ಶಿಕ್ಷಕರು ತಮ್ಮ ಹುದ್ದೆಯ ಸಮೇತ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯಾಗಿದ್ದರು. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎರಡು ಸಹಾಯಕ ಪ್ರಾಧ್ಯಾಪಕರ ಹುದ್ದೆ ಮಾತ್ರ ಬಾಕಿ ಉಳಿದಿದ್ದು, ಅವುಗಳ ಎದುರಾಗಿ ಡಾ. ಸರ್ವಮಂಗಳ ಆರ್, ಡಾ. ನಿರ್ಮಲ ಕೆ ಅವರು ಕಾರ್ಯ ನಿರ್ವಹಿಸುತ್ತಿದ್ದು ಪ್ರಸ್ತುತ ಸಿ.ಎ.ಎಸ್. ಯೋಜನೆಯಡಿಯಲ್ಲಿ ಪ್ರಾಧ್ಯಾಪಕ /ಸಹ ಪ್ರಾಧ್ಯಾಪಕರಾಗಿ ಮುಂಬಡ್ತಿ ಪಡೆದಿರುತ್ತಾರೆ. ಆದರೆ, ಅವರ ಕೇಡರ್ ಪೋಸ್ಟ್ ಸಹಾಯಕ ಪ್ರಾಧ್ಯಾಪಕರ ಹುದ್ದೆಯಾಗಿರುತ್ತದೆ. ಈ ಕಾರಣದಿಂದಾಗಿ ಜ್ಞಾನಭಾರತಿ ಆವರಣದಲ್ಲಿರುವ ವಾಣಿಜ್ಯ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆ ಖಾಲಿ ಇರುವುದಿಲ್ಲ. ಆದ್ದರಿಂದ ಡಾ. ಜಲಜ ಮತ್ತು ಡಾ. ಮುನಿರಾಜು ಅವರ ಕೇಡರ್ ಹುದ್ದೆ ಸಹಾಯಕ ಪ್ರಾಧ್ಯಾಪಕರ ಹುದ್ದೆಯಾಗಿರುವುದರಿಂದ ಅವರುಗಳು ಹುದ್ದೆ ಸಹಿತವಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ ಬರುವುದಾದರೆ ಜ್ಞಾನಭಾರತಿ ಆವರಣದ ವಾಣಿಜ್ಯ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಪರಿಗಣಿಸಬಹುದಾಗಿದೆ. ಇಲ್ಲದಿದ್ದರೆ, ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಖಾಲಿ ಉಳಿದಿರುವ ಹುದ್ದೆಗಳ ಎದುರಾಗಿ ಅವರ ವರ್ಗಾವಣೆಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರ ಪತ್ರ ದಿನಾಂಕ: 20-03-2021 ರಂದು ಬರೆದಿರುವ ಪತ್ರವನ್ನು ಪರಿಗಣಿಸಿ, ಡಾ. ಜಲಜ ಮತ್ತು ಡಾ. ಮುನಿರಾಜು ಅವರು ಅಭಿಮತದ ಆಯ್ಕೆಗನುಸಾರ ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರ ಸ್ನಾತಕೋತ್ತರ ಕೇಂದ್ರದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಸದರಿ ಶಿಕ್ಷಕರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರು-ವರ್ಗಾವಣೆ ಹೊಂದಲು ಸಿಂಡಿಕೇಟ್ ಅನುಮೋದಿಸಿತು. ಸದರಿ ಶಿಕ್ಷಕರು ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಸಿಂಡಿಕೇಟ್ ನಿರ್ಣಯಿಸಿತು.



**ವಿಷಯ ಸಂಖ್ಯೆ 10:** ಅಭಿಮತದ ಆಯ್ಕೆ ಅನುಸಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡಿರುವ ಬೋಧಕೇತರ ಸಿಬ್ಬಂದಿಯ ಮರು ವರ್ಗಾವಣೆ ಕುರಿತು.

*ನಿರ್ಣಯ*

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸೇವೆಗೆ ವರ್ಗಾಯಿಸಲ್ಪಟ್ಟಿರುವ ಶ್ರೀ ಕೆ.ವಿ. ತಿಮ್ಮಯ್ಯ ಕಿರಿಯ ಸಹಾಯಕರು, ಅವರ ಹುದ್ದೆಯ ಧಾರಣಾಧಿಕಾರವನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಳಿಸಿಕೊಂಡಿರುವ ಕಾರಣ, ಅವರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಹೊಂದಲು ಸದರಿ ನೌಕರರ ಮನವಿಯ ಮೇರೆಗೆ ಸಿಂಡಿಕೇಟ್ ಅನುಮತಿಸಿತು.



**ವಿಷಯ ಸಂಖ್ಯೆ 11:** ಯು.ವಿ.ಸಿ.ಇ ಯಲ್ಲಿನ ವಿವಿಧ ವಿಭಾಗಗಳಲ್ಲಿ ಮೆಕ್ಯಾನಿಕ್ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಇನ್‌ಸ್ಟ್ರಕ್ಟರ್/ಫೋರ್‌ಮನ್ ಹುದ್ದೆಗೆ ಬಡ್ತಿ ನೀಡಲು ಇರುವ ವೃಂದ ಮತ್ತು ನೇಮಕಾತಿಗಳ ನಿಯಮಗಳನ್ನು ಪರಿಷ್ಕರಿಸುವ ಬಗ್ಗೆ.

ಕುಲಪತಿಗಳು ಮಾತನಾಡಿ, ಯು.ವಿ.ಸಿ.ಇ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿ, ಯಾವುದೇ ಮುಂಬಡ್ತಿ ಇಲ್ಲದೆ 20 ವರ್ಷಗಳಿಂದ ಒಂದು ಹುದ್ದೆಯಲ್ಲಿರುತ್ತಾರೆ. ಆದಕಾರಣ ಅವರ ಮುಂಬಡ್ತಿಯನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಶ್ರೀ ಉದಯ ಕುಮಾರ್ ಮತ್ತು ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪ್ರಸ್ತುತ ಇರುವ ವೃಂದ ಮತ್ತು ನೇಮಕಾತಿ ನಿಯಮದನುಸಾರ ಪದೋನ್ನತಿಗೆ ಅರ್ಹರಾಗಿರುವ ತಾಂತ್ರಿಕ ಸಿಬ್ಬಂದಿಯನ್ನು ಪರಿಗಣಿಸಿ ಮುಂಬಡ್ತಿ ಕೊಡುವುದು ಒಳ್ಳೆಯದೆಂದು ಅಭಿಪ್ರಾಯ ಪಟ್ಟರು.

ಡಾ. ಗೋವಿಂದರಾಜು ಅವರು ಮಾತನಾಡಿ, ಪರಾಮರ್ಶಿತ ಟಿಪ್ಪಣಿಯಲ್ಲಿ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು ಸಮಿತಿ ರಚಿಸಬೇಕೆಂದು ಮಂಡಿಸಿರುವ ಕಾರಣ ಸದರಿ ಟಿಪ್ಪಣಿಯನ್ನು ಪರಿಷ್ಕರಿಸಿ ಮರು-ಮಂಡಿಸಲು ಸಲಹೆ ನೀಡಿದರು.

*ನಿರ್ಣಯ*

ಚರ್ಚೆಯ ನಂತರ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಗಳ ವಿವರ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು ಮುಂತಾದ ವಿವರಗಳೊಂದಿಗೆ ಸದರಿ ಸಿಬ್ಬಂದಿಯ ಪದೋನ್ನತಿ ಪರಿಗಣಿಸಲು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 12:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹಿರಿಯ ಸಹಾಯಕ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ, ಹೆಚ್ಚಿನ ಮಾಹಿತಿಯೊಂದಿಗೆ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 13:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಅಧೀಕ್ಷಕರ ಹುದ್ದೆಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಕುಲಸಚಿವರು ಮಾತನಾಡಿ, ಡಾ. ಗೋವಿಂದರಾಜು ಜಿ ಹಾಗೂ ಇನ್ನೊಬ್ಬರು ಸೇವಾ ಜ್ಯೇಷ್ಠತೆಯನ್ನು ಪರಿಷ್ಕರಿಸಲು ನ್ಯಾಯಾಲಯದಿಂದ ಆದೇಶ ಪಡೆದಿದ್ದರಿಂದ ಅವರ ಜ್ಯೇಷ್ಠತೆಯನ್ನು ಪರಿಷ್ಕರಿಸಿ ನ್ಯಾಯಾಯಲಕ್ಕೆ ಸಲ್ಲಿಸಲಾಗಿದೆ. ಗ್ರಾಜುಯೇಟ್ ಮತ್ತು ನಾನ್ ಗ್ರಾಜುಯೇಟ್ ಸಂಬಂಧ ಮತ್ತೊಂದು ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಎರಡು ಅಧೀಕ್ಷಕ ಹುದ್ದೆಗಳನ್ನು ಬಿಟ್ಟು ಖಾಲಿ ಉಳಿದ ಬಾಕಿ ಅಧೀಕ್ಷಕ ಹುದ್ದೆಗಳಿಗೆ ಮುಂಬಡ್ತಿ ನೀಡಬಹುದಾಗಿದೆ ಎಂದು ತಿಳಿಸಿದರು.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ಸಿಬ್ಬಂದಿಯ ಗೌಪ್ಯತಾ ವರದಿಯನ್ನು ಮಂಡಿಸಿರುವುದಿಲ್ಲವೆಂದು ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 14:** ಕಿರಿಯ ನೌಕರರಿಗೆ ನೀಡಿರುವ ಸೇವಾ ಹಿರಿತನದ ಸೌಲಭ್ಯಗಳನ್ನು ನಿವೃತ್ತಿ ಅಂಚಿನಲ್ಲಿರುವ ಹಿರಿಯ ಎಂ.ಆರ್.ಇ ನೌಕರರಿಗೂ ನೀಡುವಂತೆ ದಿನಾಂಕ 10.08.2020 ರಂದು ನೀಡಿರುವ ಜಂಟಿ ಮನವಿ.

*ನಿರ್ಣಯ*

ವಿಷಯವನ್ನು ಮುಂದೂಡಲಾಗಿದೆ.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 15** ಬೆಂಗಳೂರು ವಿಶ್ವವಿದ್ಯಾಲಯದ ಎನ್.ಎಸ್.ಎಸ್ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕಯಂತ್ರ ಬೆರಳಚ್ಚು) ಇವರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸುವ ವಿಷಯದ ಬಗ್ಗೆ.

ಡಾ. ಸುಧಾಕರ ಹೆಚ್ ಅವರು ಮಾತನಾಡಿ, ಹಿಂದೆ ಸಿಂಡಿಕೇಟ್‌ನಲ್ಲಿ ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕಯಂತ್ರ ಬೆರಳಚ್ಚು) ಇವರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸಲು ಅನುಮೋದನೆಯಾಗಿದೆ, ಆದ್ದರಿಂದ ಅವರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕಯಂತ್ರ ಬೆರಳಚ್ಚು) ಇವರನ್ನು ದಿನಗೂಲಿ ನೌಕರರ ಪಟ್ಟಿಯಲ್ಲಿ ಸೇರಿಸಿದರೆ, ಇನ್ನೂ ಹತ್ತಾರು ಸಿಬ್ಬಂದಿ ಇದೇ ತೆರನಾದ ಮನವಿಯನ್ನು ಸಲ್ಲಿಸುತ್ತಾರೆ. ಶ್ರೀ ಪ್ರಸನ್ನ ಎ.ಎಂ.ಆರ್ (ಗಣಕಯಂತ್ರ ಬೆರಳಚ್ಚು) ಅವರು ಸೇವಾ ಮಧ್ಯಂತರದಲ್ಲಿ ಕೆಲಸ ಬಿಟ್ಟಿದ್ದರು.

*ನಿರ್ಣಯ*

ಇನ್ನೂ ಹೆಚ್ಚಿನ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್‌ಗೆ ಮಂಡಿಸುವಂತೆ ಸೂಚಿಸಿ, ಸದರಿ ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 16:** ಶ್ರೀ ಎನ್. ಆಂಜಲಪ್ಪ, ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಾದ ಇವರು ಬೆಂಗಳೂರು ವಿಶ್ವವಿದ್ಯಾಲಯದ ಸೇವೆಗೆ ಸೇರಿದ ದಿನಾಂಕವನ್ನು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಹಾಗೂ ಇವರು ನೀಡಿರುವ ದಾಖಲೆಗಳನ್ನು ಪರಿಶೀಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

**Item No. 17:** Furnishing a panel of 3 names of retired District Judges for Appointment of as Legal Adviser in Bangalore University, Bengaluru-reg.

Sri Prem Sohanlal suggested to give notification by inviting applications for the appointment to the position of the Legal Adviser and then finalize the names.

The Vice-Chancellor clarified that earlier, Legal Adviser appointed by obtaining a panel from the Registrar General, High Court of Karnataka. Hence he will contact the Registrar General of the High Court of Karnataka and get his suggestions in the matter.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 18:** ಶ್ರೀ ಎನ್. ಪುಟ್ಟಸ್ವಾಮಿ, ನಿವೃತ್ತಿ ವಿಶ್ವವಿದ್ಯಾಲಯ ಅಭಿಯಂತರರು ಬೆಂಗಳೂರು ವಿಶ್ವವಿದ್ಯಾಲಯ ರವರಿಗೆ ಮಾನ್ಯ ಉಚ್ಚನ್ಯಾಯಾಲಯದ ದಿನಾಂಕ 07.07.2021 ರ ಆದೇಶದಂತೆ ನಿವೃತ್ತಿ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 19:** ಪ್ರೊ. ರಾಮಚಂದ್ರಗೌಡ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಇವರ ವರ್ಗಾವಣೆಗೆ ಅನುಮತಿಸಿರುವ ಆದೇಶವನ್ನು ಅನುಸಮರ್ಥಿಸುವ ಕುರಿತು.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 20:** ಡಾ. ಜಯರಾಮ ನಾಯ್ಕ, ಪ್ರಧಾನ ಕ್ಷೇಮಪಾಲಕರು, ಪುರುಷ ವಿದ್ಯಾರ್ಥಿ ನಿಲಯ 1 ಮತ್ತು 2 ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರು ಎ.ಸಿ/ಜಿ.ಐ.ಎ ಬಿಲ್ಲಿನಲ್ಲಿ ಮುಂಗಡವಾಗಿ ಹಣ ಪಡೆದು ಇದುವರೆವಿಗೂ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದ ಕಾರಣ ಅವರ ವೇತನದಲ್ಲಿ ಹಣವನ್ನು ಮುರುಗಡೆ ಮಾಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 21:** ಶ್ರೀ ಐ.ಎನ್. ಪಾಟೀಲ್, ಉಪನ್ಯಾಸಕರು (ನಿವೃತ್ತ) ಭೂಗೋಳ ಶಾಸ್ತ್ರ ವಿಭಾಗ, ಬೆಂ.ವಿ.ವಿ ಇವರಿಗೆ ತಡೆಹಿಡಿದಿರುವ ವಾರ್ಷಿಕ ಬಡ್ತಿಯನ್ನು ಮತ್ತು ಪರಿಷ್ಕೃತ ವೇತನವನ್ನು ನಿಗದಿಗೊಳಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 22:** ಶ್ರೀ ಮಲ್ಲಾರಾಧ್ಯ ಎಸ್. ಅಧೀಕ್ಷಕರು ಪರೀಕ್ಷಾ ವಿಭಾಗ, ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 23:** ಶ್ರೀ ಬಿ.ಎಂ. ಗಂಗಾಧರ ಅನುಚರ, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಮಗನಿಗೆ ಡಯಾಲಿಸಿಸ್‌ಗೆ ಖರ್ಚು ಮಾಡಿರುವ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 24:** ಸಾಯಿ ಆಫೀಸ್ ಸಪ್ಲೈಯರ್ಸ್‌ರವರನ್ನು ಕಪ್ಪು ಪಟ್ಟಿಗೆ ಸೇರಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 25:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಕಾಲೇಜುಗಳ ಸಂಯೋಜನೆಯ ಕುರಿತಂತೆ ಸಮಾನ ಕರಡು ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯ ವತಿಯಿಂದ ರೂಪಿಸುವ ಬಗ್ಗೆ

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 26:** ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಕೇಂದ್ರದ ಸ್ಥಾಪನೆ ಸಂಬಂಧಪಟ್ಟಂತೆ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 27:** Shri B. Basavalingappa Institute for Development Studies, (B-BIDS) ಸ್ಥಾಪನೆಯ ಸಂಬಂಧ ಕರಡು ಪರಿನಿಯಮಾವಳಿಗಳನ್ನು ಅನುಮೋದಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 28:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಿಕ್ಷಕರ ಸಂಘಕ್ಕೆ ಮಾನ್ಯತೆ ನೀಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 29:** ಶ್ರೀ ದಿವಾಕರ್.ಡಿ, ಸಂಶೋಧನಾ ವಿದ್ಯಾರ್ಥಿ, ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರಿಗೆ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 30:** ಬೆಂಗಳೂರು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಮತ್ತು ಸುಧಾರಣಾ ಸಮಿತಿಯನ್ನು 2021–22 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ರಚಿಸುವ ಬಗ್ಗೆ.

ಡಾ. ಗೋವಿಂದರಾಜು ಅವರು ಮಾತನಾಡಿ, ಅವರು ನೀಡಿದ್ದ ಪತ್ರಗಳ ವಿವರಗಳನ್ನು ಸಲ್ಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಮತ್ತು ಸುಧಾರಣಾ ಸಮಿತಿಯ ಸಭೆಯನ್ನು ಕರೆಯಲು ಕಳೆದ ಎರಡು ವರ್ಷಗಳಿಂದ ಕ್ರಮ ತೆಗೆದುಕೊಂಡಿರುವುದಿಲ್ಲ. ನನ್ನನ್ನು ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು ನಂತರ ಸದಸ್ಯರಾಗಿ ಬದಲಾಯಿಸಲಾಯಿತು. ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿ ಸಭೆ ಕರೆಯದಿರುವ ಬಗ್ಗೆ ಬರೆದಿದ್ದ ಪತ್ರಗಳಿಗೆ ಉತ್ತರ ನೀಡಿರುವುದಿಲ್ಲ. ಪ್ರಸ್ತುತ ಮಂಡಿಸಿರುವ ಸಮಿತಿಯ ವಿವರಗಳು ಯು.ಜಿ.ಸಿ. ಮಾರ್ಗಸೂಚಿಯನುಸಾರ ಇರುವುದಿಲ್ಲ.

ಡಾ. ಸುಧಾಕರ ಹೆಚ್ ಮತ್ತು ಶ್ರೀ ಉದಯ ಕುಮಾರ್ ಎಂ, ಅವರು ಮಾತನಾಡಿ, ಕಳೆದ ಎರಡು ವರ್ಷಗಳಿಂದ ಸಭೆ ಕರೆಯದಿರುವುದರ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿ, ಈಗ ಮಂಡಿಸಿರುವ ಸಮಿತಿಯಲ್ಲಿ ಯು.ಜಿ.ಸಿ. ಮಾರ್ಗಸೂಚಿಯನುಸಾರ ನಾಲ್ಕುಜನ ಪ್ರಾಂಶುಪಾಲರು ಇರಬೇಕಾಗಿತ್ತು. ಆದಕಾರಣ ಯು.ಜಿ.ಸಿ. ಮಾರ್ಗಸೂಚಿಯನುಸಾರ ಸಮಿತಿಯ ರಚನೆಗೆ ಪ್ರಸ್ತಾವನೆಯನ್ನು ಮರು-ಮಂಡಿಸಬೇಕೆಂದು ತಿಳಿಸಿದರು. ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತನಾಡಿ, ಕುಲಪತಿಯವರ ವಿರುದ್ಧ ಆರೋಪವನ್ನು ಮಾಡಿದರು. (Cam2, Video DVD, 04.25.06).

*ನಿರ್ಣಯ*

ಮೇಲ್ಕಂಡ ಚರ್ಚೆಯೊಂದಿಗೆ, ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಚಿಸಿ, ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 31:** ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ನೋಂದಣಿ ದಿನಾಂಕದಿಂದ ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿವೇತನ ಮಂಜೂರು ಮಾಡುವ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ ಪರಾಮರ್ಶಿತ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆರು ಜನ ಸಂಶೋಧನಾ ವಿದ್ಯಾರ್ಥಿಗಳಿಗೆ ಬಾಕಿ ಇರುವ ಒಟ್ಟು ರೂ.14,09,873/-(ಹದಿನಾಲ್ಕು ಲಕ್ಷದ ಒಂಬತ್ತು ಸಾವಿರದ ಎಂಟು ನೂರ ಎಪ್ಪತ್ತಾ ಮೂರು ರೂಪಾಯಿಗಳು)ಗಳ ಫೆಲೋಷಿಪ್ ಮೊತ್ತವನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 32:** ವಿದ್ಯಾರ್ಥಿನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.

ಶ್ರೀ ಪ್ರೇಮ್ ಸೋಹನ್ ಲಾಲ್ ಅವರು ಮಾತಾನಾಡಿ, ದಿನಾಂಕ: 07-08-2021ರಂದು ಜರುಗಿದ ವಿದ್ಯಾರ್ಥಿನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಗಳ ಪ್ರತಿ ವಿಷಯದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಕಾರಣ ವಿಷಯಗಳು ಹಣಕಾಸಿಗೆ ಸಂಬಂಧಿಸಿದ್ದಾಗಿವೆ ಎಂದು ತಿಳಿಸಿದರು.

*ನಿರ್ಣಯ*

ಚರ್ಚೆಯ ನಂತರ ದಿನಾಂಕ: 07-08-2021ರಂದು ಜರುಗಿದ ವಿದ್ಯಾರ್ಥಿನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಗಳಲ್ಲಿ ಕೆಳಕಂಡ ವಿಷಯಗಳ ಬಗೆಗಿನ ನಡಾವಳಿಗಳನ್ನು ಮಾತ್ರ ಸಿಂಡಿಕೇಟ್ ಅನುಮೋದಿಸಿತು.

**ಅನುಮೋದಿತ ವಿಷಯಗಳು:**

ವಿಷಯ ಸಂಖ್ಯೆ: 1. ವಿಶ್ವವಿದ್ಯಾಲಯದ ಒಟ್ಟು 12 ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಮಂಚ, ಹಾಸಿಗೆ, ದಿಂಬು, ಕುರ್ಚಿ ಟೇಬಲ್, ಅಲ್ಮೆರಾ ಖರೀದಿಸುವ ಪ್ರಸ್ತಾವನೆ.

ವಿಷಯ ಸಂಖ್ಯೆ: 2. ಎಲ್ಲಾ ಹಾಸ್ಟೆಲ್‌ಗಳಿಗೆ ಅಡುಗೆ ತಯಾರಿಸಲು ಪಾತ್ರೆ ಇನ್ನಿತರ ಸಾಮಗ್ರಿಗಳ ಖರೀದಿ ಬಗ್ಗೆ.

ವಿಷಯ ಸಂಖ್ಯೆ: 7. ಹಾಸ್ಟೆಲ್‌ಗಳಲ್ಲಿ English Language Lab, Skill Develoopment Traning Centre, Computer Lab ಮತ್ತು Gym ಗಳನ್ನು ಪ್ರಾರಂಭಿಸುವುದರ ಬಗ್ಗೆ.

ವಿಷಯ ಸಂಖ್ಯೆ: 10. ಸಂಯೋಜಿತ ಕಾಲೇಜುಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲು ಅವಕಾಶ ಇಲ್ಲ

ವಿಷಯ ಸಂಖ್ಯೆ:11. ಪಿ.ಜಿ.-2 ಹಾಸ್ಟೆಲ್ ಒಳಗಡೆ ಕಾಂಕ್ರೀಟ್ ರಸ್ತೆ ನಿರ್ಮಾಣ ಕುರಿತು

ವಿಷಯ ಸಂಖ್ಯೆ:12. ಹಾಸ್ಟೆಲ್ ಕೊಠಡಿಗಳ ಕಿಟಕಿ ಬಾಗಿಲುಗಳನ್ನು ಸರಿಪಡಿಸುವ ಬಗ್ಗೆ.

ವಿಷಯ ಸಂಖ್ಯೆ: 13. ಪಿ.ಜಿ.-1, ಪಿ.ಜಿ.-2 ಹಾಸ್ಟೆಲ್‌ಗಳಿಗೆ ಖಾಯಂ ನೌಕರರನ್ನು ವರ್ಗಾವಣೆ ಮಾಡುವ ಬಗ್ಗೆ.

ವಿಷಯ ಸಂಖ್ಯೆ: 14. ಎಲ್ಲಾ ಹಾಸ್ಟೆಲ್‌ಗಳಿಗೆ ಸೋಲಾರ್ ವ್ಯವಸ್ಥೆ ಮಾಡುವ ಬಗ್ಗೆ.

ವಿಷಯ ಸಂಖ್ಯೆ: 15. ಬಿಸಿಎಂ ಹಾಸ್ಟೆಲ್‌ಗೆ ಹೋಗುವ ರಸ್ತೆಯ ಡಾಂಬಾರೀಕರಣ,

ವಿಷಯ ಸಂಖ್ಯೆ: 16. ಕೋರ್ಸು ಮುಗಿದಿರುವ ವಿದ್ಯಾರ್ಥಿಗಳನ್ನು ತೆರವುಗೊಳಿಸುವ ಕುರಿತು

ವಿಷಯ ಸಂಖ್ಯೆ: 18. ಪಿ.ಜಿ.-1 ಹಾಸ್ಟೆಲ್‌ನಲ್ಲಿ ಸಂಶೋಧನಾ ವಿದ್ಯಾರ್ಥಿಗಳ ನಡುವೆ ನಡೆದಿರುವ ಘಟನೆ.

ವಿಷಯ ಸಂಖ್ಯೆ: 19. ಪುರುಷ ವಿದ್ಯಾರ್ಥಿನಿಲಯ ನಂ.3, ವಿದ್ಯಾರ್ಥಿಯೊಬ್ಬನ ನಡವಳಿಕೆಯ ಬಗ್ಗೆ.

ವಿಷಯ ಸಂಖ್ಯೆ: 20. ಹಾಸ್ಟೆಲ್ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಅಂತರ್‌ವರ್ಗಾವಣೆ ಮಾಡುವ ಬಗ್ಗೆ.

ವಿಷಯ ಸಂಖ್ಯೆ: 21. ಪಿ.ಜಿ. ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯದ ಅವಕಾಶವಿಲ್ಲ.

ವಿಷಯ ಸಂಖ್ಯೆ: 22. ಈಶಾನ್ಯ ರಾಜ್ಯಗಳ ಮಹಿಳಾ ವಿದ್ಯಾರ್ಥಿ ನಿಲಯಗಳ ಅನುದಾನ ಬಳಸಿಕೊಳ್ಳುವ ಬಗ್ಗೆ.

ವಿಷಯ ಸಂಖ್ಯೆ: 23. ಡಿ.ಎಸ್.ಡಬ್ಲ್ಯೂ ವಿಭಾಗಕ್ಕೆ ಸಿಬ್ಬಂದಿಯನ್ನು ವರ್ಗಾಯಿಸುವ ಬಗ್ಗೆ.

ವಿಷಯ ಸಂಖ್ಯೆ: 25. ಇತರ ವಿಷಯಗಳು.

**ಮುಂದೂಡಲ್ಪಟ್ಟ ವಿಷಯಗಳು:**

ವಿಷಯ ಸಂಖ್ಯೆ: 3. ದಿನಸಿ ಸಾಮಗ್ರಿಗಳ ಖರೀದಿಗೆ/ಊಟದ ವೆಚ್ಚ ಒಂದು ದಿನಕ್ಕೆ ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಿರುವ ರೂ.75/-ರಿಂದ 100/-ಕ್ಕೆ ಹೆಚ್ಚಿಸುವ ಬಗ್ಗೆ.

ವಿಷಯ ಸಂಖ್ಯೆ: 4. ರಾಮನಗರ ಸ್ನಾತಕೋತ್ತರ ಕೇಂದ್ರದ ಹಾಸ್ಟೆಲ್‌ನ ಪ್ರಧಾನ ಕ್ಷೇಮಪಾಲಕರು ಕೋರಿರುವ ಹೆಚ್ಚುವರಿ ಊಟದ ಖರ್ಚಿನ ಮೊತ್ತ ರೂ.32,945/- ಮಂಜೂರು ಮಾಡುವ ಬಗ್ಗೆ.

ವಿಷಯ ಸಂಖ್ಯೆ: 5. 1 ಮತ್ತು 3ನೆ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ 2020ನೇ ಡಿಸೆಂಬರ್‌ನಿಂದ 2021ನೇ ಏಪ್ರಿಲ್ 18ರ ಅವಧಿಯೊಳಗೆ ಹೆಚ್ಚುವರಿ ಊಟದ ಖರ್ಚಿನ ಬಾಕಿ ಮೊತ್ತ ರೂ.23,36,334/-ನ್ನು ಮಂಜೂರು ಮಾಡುವ ಕುರಿತ ಪ್ರಸ್ತಾವನೆ.

ವಿಷಯ ಸಂಖ್ಯೆ: 6. ಅವಧಿ ಮುಗಿದ ಸಂಶೋಧನಾ ವಿದ್ಯಾರ್ಥಿಗಳಿಗೆ ಡಿಸೆಂಬರ್ 20ರಿಂದ 18ನೇ ಏಪ್ರಿಲ್ 2021ರ ವರೆಗೆ ಊಟದ ವ್ಯವಸ್ಥೆ ಕಲ್ಪಿಸಿದ ಖರ್ಚು ರೂ.4,17,000/-ನ್ನು ಮಂಜೂರು ಮಾಡುವ ಕುರಿತು.

ವಿಷಯ ಸಂಖ್ಯೆ: 8. ಹಾಸ್ಟೆಲ್‌ಗಳ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹೆಚ್ಚುವರಿ ಹೊರಗುತ್ತಿಗೆ ನೌಕರರನ್ನು ಪಡೆದುಕೊಳ್ಳುವ ಬಗ್ಗೆ.

ವಿಷಯ ಸಂಖ್ಯೆ: 9. ಮಹಿಳಾ ವಿದ್ಯಾರ್ಥಿ ನಿಲಯ-1, ಇಲ್ಲಿನ ಸಾದಿಲ್ವಾರು ವೆಚ್ಚ ಹೆಚ್ಚಿಸುವ ಬಗ್ಗೆ.

ವಿಷಯ ಸಂಖ್ಯೆ: 17. ಹಾಸ್ಟೆಲ್ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ವಸತಿ ಸೌಲಭ್ಯ ಕಲ್ಪಿಸುವ ಕುರಿತು.

ವಿಷಯ ಸಂಖ್ಯೆ: 24. ಹಾಸ್ಟೆಲ್ ಕಾರ್ಯ ನಿರ್ವಹಿಸುತ್ತಿರುವ ಪ್ರಧಾನ ಕ್ಷೇಮಪಾಲಕರುಗಳಿಗೆ ಪ್ರತಿ ತಿಂಗಳು ಗೌರವ ಸಂಭಾವನೆ ಹಾಗೂ ಗಳಿಕೆ ರಜೆ ನೀಡುವ ಸಂಬಂಧ.

ಪ್ರೊ. ಟಿ.ವಿ. ರಾಜು ಅವರು ಮಾತನಾಡಿ, ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು, ಹೊಸ ಯೋಜನೆ/ವೆಚ್ಚಗಳ ಪ್ರಸ್ತಾವನೆಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿದರು.



**ವಿಷಯ ಸಂಖ್ಯೆ 33:** 2021-22ನೇ ಸಾಲಿನ ಆಯವ್ಯಯ ಅಂದಾಜಿಗೆ ಕೆಲವು ಚಟುವಟಿಕೆ ಯೋಜನೆಗಳ/ಕಾರ್ಯಕ್ರಮಗಳಿಗೆ ಅನುದಾನ ಒದಗಿಸುವ ಬಗ್ಗೆ.

***ನಿರ್ಣಯ***

ವಿಷಯವನ್ನು ಮುಂದೂಡಲಾಯಿತು.



Item No. **34:** Proceedings of the meeting of the advisory committee of placement cell held on 28.06.2021.

***Resolution:***

Deferred.



**ವಿಷಯ ಸಂಖ್ಯೆ 35:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಬೆಂಗಳೂರು ವಿದ್ಯುತ್ ಕಂಪನಿ ವತಿಯಿಂದ 66/11 ಕೆ.ವಿ ವಿದ್ಯುತ್ ಉಪ-ಕೇಂದ್ರ ಸ್ಥಾಪನೆ ಮಾಡಲು ಜ್ಞಾನಭಾರತಿ ವಿಶ್ವವಿದ್ಯಾಲಯ ಆವರಣದಲ್ಲಿ 50 X 50 ಮೀಟರ್ ಜಾಗವನ್ನು ನೀಡುವ ಬಗ್ಗೆ.

***ನಿರ್ಣಯ***

ವಿಷಯವನ್ನು ಮುಂದೂಡಲಾಯಿತು.

Item No. **36:** Providing 12-00 Acreas of land to BWSSB to establish 60 MLD Waste Water Treatment Plant at Bangalore University Campus to provide water from waste water treatment to all the trees herbs, sherbs and grass of Bangalore University as there is scarcity of water to the plants.

***Resolution:***

Deferred.

*Proceedings of the 161st Adjourned meeting of the Syndicate held on 17.11.2021*

Item No. **37:** Proceedings of the 60th Works Committee meeting held on 05th July 2021, at 3.00 P.M in the Board Room, U.V.C.E, K.R Circle, Bangalore University, Bengaluru

***Resolution:***

Deferred.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 38:** ದಿನಾಂಕ 23.03.2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 39:** ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ರಾಮನಗರದ ಜಿಗೇನಹಳ್ಳಿ ಸರ್ವೆ ನಂ. 101 ರಲ್ಲಿ 7 ಎಕರೆ 31 1/4 ಗುಂಟೆ ಜಮೀನನ್ನು ಭೂಸ್ವಾಧೀನ ಪಡೆಯಲು ಬೆಲೆ ನಿರ್ಧರಿಸುವ ಕುರಿತು ವಿಶೇಷ ಭೂಸ್ವಾಧೀನಾಧಿಕಾರಿ ರಾಮನಗರ ಜಿಲ್ಲೆ, ರಾಮನಗರ ಇವರು ಕಳುಹಿಸಿರುವ ವರದಿ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 40:** ಶ್ರೀ ಬೈರಪ್ಪ, ಫೋರ್‌ಮೆನ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ, ಯು.ವಿ.ಸಿ.ಇ ಇವರಿಗೆ ಎಐಸಿಟಿಇ ವೇತನ ಶ್ರೇಣಿ ಅಳವಡಿಸಿದ ನಂತರ ಮೂಲ ಪಿಂಚಣಿಯನ್ನು ಮರು ನಿಗಧಿಪಡಿಸಿ ವ್ಯತ್ಯಾಸದ ಮೊತ್ತ ಪಾವತಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 41:** ಶ್ರೀ ಮಲ್ಲಿಕಾರ್ಜುನಯ್ಯ.ಎಂ, ಕಿರಿಯ ಸಹಾಯಕರು, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದ ಬಗ್ಗೆ ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸಿನ ಮೇರೆಗೆ ದಂಡನೆ ವಿಧಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st meeting of the Syndicate held on 09.11.2021*

Item No. **42:** Enhancement of number of scholarships under Social Science Talent Search Scheme and enhancement sanction of additional grants-reg.

***Resolution:***

Deferred.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 43:** ಆರೋಗ್ಯ ಅಧಿಕಾರಿಗಳು (ಹೊರಗುತ್ತಿಗೆ), ಆರೋಗ್ಯ ಕೇಂದ್ರ, ಬೆಂ.ವಿ.ವಿ ಇವರಿಗೆ ಎಸಿ ಬಿಲ್ಲಿನಲ್ಲಿ ಹಣ ನೀಡಿರುವುದ್ಕೆ ಘಟನೋತ್ತರ ಮಂಜೂರಾತಿ ಕುರಿತು.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*P roceedings of the 161st Adjourned meeting of the Syndicate held on 17.11.2021*

Item No.**44:** Sanction of Annual Increments from 2003 to Sri. B.K. Venugopal Associate Professor, Dept. of Electronics and Communication Engineering, UVCE-reg

***Resolution:***

Deferred.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 45:** 2021–22ನೇ ಸಾಲಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಹೊಸದಾಗಿ ಸ್ವಾಯತ್ತತೆಯನ್ನು ಮಂಜೂರು ಮಾಡುವ ಸಲುವಾಗಿ ಸ್ಥಾಯಿ ಸಮಿತಿಯನ್ನು ರಚಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

Proceedings of the 161st Adjourned meeting of the Syndicate held on 17.11.2021

**ವಿಷಯ ಸಂಖ್ಯೆ 46:** ದಿ॥ ಪುಟ್ಟಸ್ವಾಮಿ, ಹಿರಿಯ ಸಹಾಯಕರು, ವಿದ್ಯಾಕಾರ್ಯ ಶಾಖೆ-3, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

Proceedings of the 161st Adjourned meeting of the Syndicate held on 17.11.2021

**ವಿಷಯ ಸಂಖ್ಯೆ 47:** ಶ್ರೀ ಧನರಾಜ್.ಹೆಚ್ ಗ್ರೂಪ್ 'ಡಿ' ನೌಕರರು, ಭೌತಶಾಸ್ತ್ರ ವಿಭಾಗ, ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ನಡೆಸಿದ ವಿಚಾರಣಾ ವರದಿಯನ್ನಾಧರಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

Proceedings of the 161st Adjourned meeting of the Syndicate held on 17.11.2021

**ವಿಷಯ ಸಂಖ್ಯೆ 48:** ಶ್ರೀ ಶಶಿಕುಮಾರ್.ಕೆ ದಿವಂಗತ ಶ್ರೀ ಕೇಶವಲು.ಜಿ, ಅನುಚರರು, ಸಮಾಜಕಾರ್ಯ ವಿಭಾಗ, ಇವರ ಪುತ್ರ ಇವರನ್ನು ಅನುಕಂಪದ ಆಧಾರದ ಮೇಲೆ ಹೆಚ್ಚಿನ ವಿವರಗಳೊಂದಿಗೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

Proceedings of the 161st Adjourned meeting of the Syndicate held on 17.11.2021

**ವಿಷಯ ಸಂಖ್ಯೆ 49:** ಡಾ॥ ವಿ. ಸುದೇಶ್, ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಇವರಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ, ಡಾ॥ ವಿ. ಸುದೇಶ್, ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಇವರಿಗೆ ಒಂದು ವರ್ಷದ ಅವಧಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

Proceedings of the 161st Adjourned meeting of the Syndicate held on 17.11.2021

**ವಿಷಯ ಸಂಖ್ಯೆ 50:** ಅಕಾರ್ಯ ವಿಚಾರಣಾ ಸಮಿತಿಯ ದಿನಾಂಕ 24.02.2020 ರಂದು ನಡೆದ ಸಭೆಯ ನಡವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

**ವಿಷಯ ಸಂಖ್ಯೆ 51:** ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ'ಇವರ ಅನಿಧಿಕೃತ ಗೈರು ಹಾಜರಿಯ ಬಗ್ಗೆ ಕ್ರಮವಹಿಸುವ ಹಾಗೂ ದಂಡನೆಯನ್ನು ವಿಧಿಸುವ ಬಗ್ಗೆ ಹಾಗೂ ಹುಟ್ಟಿದ ದಿನಾಂಕ ಮತ್ತು ಇತ್ಯಾದಿ ವಿವರಗಳೊಂದಿಗೆ ವಿಷಯವನ್ನು ಮಂಡಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 52:** ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಗ್ರಂಥಪಾಲಕರ ಕ್ರೋಢೀಕೃತ ವೇತನವನ್ನು ಹೆಚ್ಚಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 53:** ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ದಿನಾಂಕ 12.10.2021 ರಂದು ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು/ಕಛೇರಿಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸುವ ಆದೇಶವನ್ನು ಅನುಸಮರ್ಥಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 54:** ಬಯೋ ಪಾರ್ಕ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ತೋಟಪಾಲಕ ಕಾರ್ಯದ ಜೊತೆಗೆ ಟ್ರ್ಯಾಕ್ಟರ್ ಚಾಲನೆ ಕಾರ್ಯನಿರ್ವಹಿಸುತ್ತಿರುವ ಒಬ್ಬ ನೌಕರನಿಗೆ ಚಾಲಕ ವೇತನವನ್ನು ನಿಗದಿಪಡಿಸಿ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಹೊರಡಿಸಿರುವ ಆದೇಶ ಅನುಸಮರ್ಥಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

Item No. **55:** Dr. P. Ramanna, Professor, Dept. of Political Science, BUB, requesting for VRS (Voluntary Retirement from Service) from Bangalore University service.

**Resolution:**

After detailed discussion, the Syndicate resolved to consider the request of Dr. P. Ramanna, Professor, Dept. of Political Science and resolved to grant permission to take Voluntary Retirement from the University Service w.e.f. 01-01-2022, as per KCSR Rule No.285(1)(a).

**ವಿಷಯ ಸಂಖ್ಯೆ 56:** 2020–21ನೇ ಸಾಲಿನಲ್ಲಿ ಹೊಸ ಕಾಲೇಜು ಸಂಯೋಜನೆ ಕೋರಿ ಅರ್ಜಿ ಸಲ್ಲಿಸಿ, ತದನಂತರ ಸರ್ಕಾರದ ನಿರ್ದೇಶನದಂತೆ, NBC (National Building Code) ನಿಯಮಾವಳಿಗಳನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance certificate ಗಳನ್ನು ಸಲ್ಲಿಸದಿರುವ ಕಾಲೇಜುಗಳಿಗೆ ಸಂಯೋಜನೆ ಪ್ರಕ್ರಿಯೆ ಅಥವಾ ಸಂಯೋಜನಾ ಶುಲ್ಕಮರು–ಪಾವತಿಯ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**Item No.57:** Introduction of new UG Honours Courses in Bangalore University under New National Education Policy-2020

***Resolution:***

Deferred.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 58:** ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ ಮಂಜೂರು ಮಾಡಿರುವ ಆದೇಶವನ್ನು ಅನುಸಮರ್ಥಿಸುವ (Ratification) ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ, ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ ಮಂಜೂರು ಮಾಡುವ ಕುರಿತು ಸರ್ಕಾರದ ಆದೇಶ ಸಂಖ್ಯೆ: ಆಇ 4(ಇ) ಸೇನಿಸೇ 2021 ದಿನಾಂಕ: 21–06–2021ರನ್ನು ಅಳವಡಿಸಿ ಹೊರಡಿಸಲಾಗಿರುವ ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಸಿಬ್ಬಂದಿ–1/ಸಿ1/ವೇಶ್ರೇ/2018 ದಿನಾಂಕ: 25–10–2021 ಅನ್ನು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 59:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಿಗೆ ನೀಡುತ್ತಿರುವ ಶೇ. 75% ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಿಸುವ ವಿಷಯದ ಬಗ್ಗೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು. ರವರು ದಿನಾಂಕ 02.09.2021 ರ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 60:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿರುವ ತಾತ್ಕಾಲಿಕ ದಿನಗೂಲಿ/ಮಾಸಿಕ ಕ್ರೋಢೀಕೃತ ನೌಕರರಿಗೆ ನೀಡುತ್ತಿರುವ ಶೇ 75% ತುಟ್ಟಿಭತ್ಯೆಯನ್ನು ಶೇ 100% ಕ್ಕೆ ಹೆಚ್ಚಿಸುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 61:** ಶ್ರೀ ಎನ್. ಪುಟ್ಟಸ್ವಾಮಿ, ವಿಶ್ವವಿದ್ಯಾಲಯದ ನಿವೃತ್ತ ಅಭಿಯಂತರರು, ಬೆಂಗಳೂರು ವಿಶ್ವವಿದ್ಯಾಲಯದ ರವರಿಗೆ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯದ ದಿನಾಂಕ 07.07.2021 ರ ಆದೇಶದಂತೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

*ನಿರ್ಣಯ*

ವಿಷಯವನ್ನು ಮುಂದೂಡಲಾಯಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 62:** 2020–21ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಪರಿಗಣಿಸುವುದರ ಕುರಿತು.

*ನಿರ್ಣಯ*

ಚರ್ಚೆಯ ನಂತರ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 50(1)ರ ಅನುಸಾರ 2020–21ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಸಿಂಡಿಕೇಟ್ ದಾಖಲಿಸಿ ಅನುಮೋದಿಸಿತು.

*Proceedings of the 161st Adjourned meeting of the Syndicate held on 17.11.2021*

**ವಿಷಯ ಸಂಖ್ಯೆ 63:** ಸ್ನಾತಕೋತ್ತರ ಕೇಂದ್ರ, ಪುರುಷ ವಿದ್ಯಾರ್ಥಿ ನಿಲಯ, ಕೋಲಾರ ಇಲ್ಲಿನ ಕಟ್ಟಡ ಬಾಡಿಗೆ ಹಣದಲ್ಲಿ ಆದಾಯ ತೆರಿಗೆ ಪಾವತಿಸುವ ಮತ್ತು ಪ್ರಧಾನ ಕ್ಷೇಮಪಾಲಕರ ಖಾತೆಯಲ್ಲಿರುವ ಹಣವನ್ನು ವಿತ್ತಾಧಿಕಾರಿಗಳ ಖಾತೆಗೆ ಪಾವತಿಸುವ ಹಾಗೂ ಪ್ರಧಾನ ಕ್ಷೇಮಪಾಲಕರ ಎಸ್.ಬಿ.ಐ ಖಾತೆಯನ್ನು ರದ್ದು ಪಡಿಸಲು ಅನುಮೋದಿಸುವ ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ, ಪರಾಮರ್ಶಿತ ಟಿಪ್ಪಣಿಯಲ್ಲಿರುವಂತೆ ಸ್ನಾತಕೋತ್ತರ ಕೇಂದ್ರ, ಪುರುಷ ವಿದ್ಯಾರ್ಥಿ ನಿಲಯ, ಕೋಲಾರ ಇಲ್ಲಿನ ಕಟ್ಟಡ ಬಾಡಿಗೆ ಹಣದಲ್ಲಿ ಆದಾಯ ತೆರಿಗೆ ಪಾವತಿಸುವ ಮತ್ತು ಪ್ರಧಾನ ಕ್ಷೇಮಪಾಲಕರ ಖಾತೆಯಲ್ಲಿರುವ ಹಣವನ್ನು ವಿತ್ತಾಧಿಕಾರಿಗಳ ಖಾತೆಗೆ ವರ್ಗಾಯಿಸುವ ಹಾಗೂ ಪ್ರಧಾನ ಕ್ಷೇಮಪಾಲಕರ ಎಸ್.ಬಿ.ಐ ಖಾತೆಯನ್ನು ರದ್ದು ಪಡಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 64:** ಬೆಂಗಳೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧಕರ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಸಂಬಂಧಿಸಿದಂತೆ, ನುರಿತ ನಿವೃತ್ತ ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

*ನಿರ್ಣಯ*

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧಕರ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಹಾಗೂ ಸಮಂಜಸ ಉತ್ತರಗಳನ್ನು ಸಿದ್ಧಪಡಿಸಲು ಒಬ್ಬ ಆಡಿಟ್ ಆಫೀಸರ್ (ನಿ) ಮತ್ತು ಒಬ್ಬ ಲೆಕ್ಕ ಅಧೀಕ್ಷಕರು (ನಿ) ರ ಸೇವೆಯನ್ನು ಕರ್ನಾಟಕ ಇನ್ಸಿಟಿಟ್ಯೂಟ್ ಆಫ್ ಆಡಿಟರ್ಸ್ ಇವರಿಂದ ಪಡೆದುಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

[signature] 7/12/21

**ಕುಲಪತಿಯವರು**